ಸಂಪಾದಕರು :
ಎಂ.ಎಸ್. ವಿಕಾಸ್

ಮಂಗಳವಾರ, ಮೇ 14, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 362 RNI : 27369/75


# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ


50 1974 2023
janathavani@mac.com
www.janathavani.com
08192 254736 91642 99999



ADMISSIONS OPEN FOR 2024-25

ಚೈತನ್ಯ ಎಜ್ಯುಕೇಷನಲ್ ಟ್ರಸ್ಟ್ (ರಿ.)
ಚೈತನ್ಯ ಹೈ-ಟೆಕ್ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್, ಮ್ಯಾನೇಜ್‌ಮೆಂಟ್ & ಸೈನ್ಸ್
(ದಾವಣಗೆರೆ ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)
CHAITANYA HI-TECH INSTITUTE OF COMMERCE, MANAGEMENT & SCIENCE (CHICMS)
College Code : 1370 (Affiliated to Davangere University, AICTE & Approved by Government of Karnataka) AISHE Code : 66065

Compitative Exams Oriented College
Hurry Up..! Limited Seats.
Aim for Excellence . .

Courses Offered : BCA | BBA | B.Com | BA | BSc. (PCM, PMCS, CBZ)
3 years Integrated Courses with Special Guide for : Civil Services & IBPS etc.
Appointment Exams, Qualifieds & Experienced Faculty Team, Personality & Co-Carricular Activities.
* Well Equipped Class Rooms, Laboratory * Library, Vehicle & Hostel Facilities

ಪಿಯುಸಿ ಪರೀಕ್ಷೆಯಲ್ಲ ಶೇ. 95% ಕ್ಕಿಂತ ಹೆಚ್ಚಿನ ಅಂಕಗಳಿಸಿದ ವಿದ್ಯಾರ್ಥಿಗಳಿಗೆ
ಉಚಿತ ಪ್ರವೇಶ

ಬನ್ನಿ... ನಿಮ್ಮ ಮಕ್ಕಳ ಸದೃಢವಾದ ಭವಿಷ್ಯವನ್ನು ಕಟ್ಟಲು ನಮ್ಮ ಜೊತೆ ಕೈ ಜೋಡಿಸಿ...
info@chaitanyahitechinstitute.com www.chaitanyahitechinstitute.com
CONTACT US : 7551164666 / 7551165666
#3301 A/B, Kalleshwara Krupa, Near Bapuji High School, MCC 'B' Block, Davangere 577004



Sree Bhagwan Mahaveer Educational Trust(R)

JAIN VIDYALAYA
STATE/CBSE SCHOOL & COMPOSITE P U COLLEGE
SPECIAL FOCUS ON THE HOLISTIC DEVELOPMENT OF EACH STUDENT

CBSE Grade 10 result 2024
Congratulations
100% Result

Anjali Sujitkumar Shaha 91.2%
Jainam S Jain 88%
Spandana H 87.8%
Chandana A U 85.4%
Praneel N Chawan 78.8%
Manvitha M N 78%
Preetham M N 77.4%
Adithya R 75.4%
Ishita C Rathod 74.2%
Sabir Hussain 73.2%
Aishwarya M 72.2%
Jeetendar Patel 72.2%
Mannat L Nagar 72.2%
Prakruthi Bindu Y 70.2%
Ishant Jalsinge 67.6%
Mohammed Khamar Raza 66.4%
Bhavin S Jain 65.6%
Nikunj H Chhabhaiya 65.6%
Anusha B R 64.2%
Dhanyatha M P 64.2%
Sankalpa M 62.8%
Yogitha Raj Purohith 62.4%
Nisha G 62.2%
Pooja B P 61.6%
Abdul Kahdir 60.6%
Katuri Vishal Raj 60.4%
Rudransh Jain 60%
Nandan K B 56.6%
Jayanth K G 56.2%
55.6%
Vidya G H 54.8%
Yashwanth S H 53.2%
52.6%
Praveen Singh 50.8%
50%
Pruthviraj M 48.4%
Praveen Aanjana 47.4%

CBSE & PU COLLEGE CAMPUS
STATE CAMPUS

ADMISSIONS ARE OPEN FOR
* PLAY HOME TO 10TH CLASS
* I PUC AND II PUC SCIENCE AND COMMERCE
SCIENCE (PCMB) (PCMCS)
COMMERCE (EABCS) (EABS)

CAMPUS
# 3348/182,183 Kasaba Hobli,
Shamanur Davangere-577004
www.jainvidyalayadvg.com
9844474481 / 9844474485

HEAD OFFICE
#65, 5th Cross, P. J. Extension,
Davangere - 577002.
Ph : 08192 232424

Management Members Congratulate the performers and Staff Members for bringing in the performance
Sri Ramesh Kumar J. Secretary
Sri Ramesh Kumar H. President



Sri Anjanadri Education Trust (R)
SMT SRIDEVI THIMMAREDDY
INTERNATIONAL PUBLIC SCHOOL
A Premier CBSE School; Affiliated to CBSE, vide No: 830961
Devarabelakere Road, Shamanur, Davangere - 577004

CBSE GRADE 10th RESULTS 2024
Congratulations 100% Result

1st KEERTHAN B T Percentage - 93.4% 467/500
2nd BHOOMIKA B R Percentage - 93% 465/500
3rd MEKA RUTHIK SURYA Percentage - 87.8% 439/500

GEMS OF THE SCHOOL

SHRI ABHIRAM C
BAKULA G S
MD KHWAJA B N
DIGANTH M H
SATYA PRAVARDHAN M U
MOHAMMED RAYYAN ALI
NANDEESH KUMAR E V
SWAYAM G R
AMRUTHA D S
PREETAM DEEPAK K
MOHAMED SADIQ
VRIDDHI S S
SAI NIKHIL E
NOOR FATHIMA
NIHARIKA V D
JEEVAN REDDY N S
PREETHAM H K
KEERTHANA B D
FARHANA AQTHAR
HEMANTH S V
TARUN P L
SANJAY V P
K SAI ANIVESH

ADMISSIONS OPEN 2024-25
HOSTEL AND TRANSPORTATION
9448233498, 9900055536, 9900077734, 9900077729, 9964636810

Dr THIMMAREDDY
GROUP OF INSTITUTIONS
CBSE SCHOOL
PUC COLLEGE FOR GIRLS
PUC COLLEGE FOR BOYS
IIT-NEET ACADEMY
DAVANGERE

## ಬಿಜೆಪಿ ಹಿರಿಯ ನಾಯಕ ಸುಶೀಲ್ ಮೋದಿ ನಿಧನ



ಪಾಟ್ನ, ಮೇ 13 – ಬಿಜೆಪಿ ಹಿರಿಯ ನಾಯಕ ಹಾಗೂ ಬಿಹಾರದ ಮಾಜಿ ಉಪ ಮುಖ್ಯಮಂತ್ರಿ ಸುಶೀಲ್ ಕುಮಾರ್ ಮೋದಿ ನಿಧನರಾಗಿದ್ದಾರೆ. ಅವರು ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಅವರಿಗೆ 72 ವರ್ಷ ವಯಸ್ಸಾಗಿತ್ತು.

ಪಾಟ್ನಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಕಾರ್ಯಕರ್ತರಾಗುವ ಮೂಲಕ ಅವರು ರಾಜಕೀಯ ಜೀವನಕ್ಕೆ ಕಾಲಿಟ್ಟಿದ್ದರು. 1973ರಲ್ಲಿ ಅವರು ಪಾಟ್ನಾ ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿಯಾಗಿದ್ದರು.

ಮೂರು ದಶಕಗಳ ಕಾಲ ರಾಜಕೀಯದಲ್ಲಿದ್ದ ಅವರು, ಶಾಸಕ, ಪರಿಷತ್ ಸದಸ್ಯ ಹಾಗೂ ಲೋಕಸಭೆ ಮತ್ತು ರಾಜ್ಯಸಭೆಗಳ ಸದಸ್ಯರಾಗಿದ್ದರು. 2005ರಿಂದ 2013ರ ನಡುವೆ ಹಾಗೂ 2017ರಿಂದ 2020ರ ನಡುವೆ ಅವರು ಬಿಹಾರದ ಉಪ ಮುಖ್ಯಮಂತ್ರಿಯಾಗಿದ್ದರು.

## ನಗರದಲ್ಲಿ ಇಂದು ಶ್ರೀ ಭಗಿರಥ ಜಯಂತಿ

ಜಿಲ್ಲಾಡಳಿತದ ವತಿಯಿದ ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಡಳಿತ ಭವನದಲ್ಲಿ ಶ್ರೀ ಭಗಿರಥ ಜಯಂತಿಯನ್ನು ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ಮಹಾರಾಷ್ಟ್ರದಂತೆ ಕರ್ನಾಟಕದಲ್ಲೂ ಪತನ

### ರಾಜ್ಯ ಸರ್ಕಾರದ ಬಗ್ಗೆ ಮಹಾರಾಷ್ಟ್ರ ಸಿಎಂ ಏಕನಾಥ ಶಿಂಧೆ ಹೇಳಿಕೆ

### ಕೇಂದ್ರದಲ್ಲಿ ಎನ್‌ಡಿಎ ಅಧಿಕಾರ ಕನಸು ಎಂದ ಸಿದ್ದರಾಮಯ್ಯ

ಬೆಂಗಳೂರು, ಮೇ 13 - ಮಹಾರಾಷ್ಟ್ರ ರಾಜಕೀಯದಲ್ಲಿ ಬೀಸಿದ ಬಿರುಗಾಳಿ ಕರ್ನಾಟಕದಲ್ಲೂ ಬೀಸಿ ಕಾಂಗ್ರೆಸ್ ಸರ್ಕಾರ ಪತನಗೊಳ್ಳಲಿದೆ ಎಂದು ಅಲ್ಲಿನ ಮುಖ್ಯಮಂತ್ರಿ ಏಕನಾಥ ಶಿಂಧೆ ಹೇಳಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ನಮ್ಮ ಕಾಂಗ್ರೆಸ್‌ನ ಯಾವ ಶಾಸಕರೂ ಖರೀದಿಗಿಲ್ಲ. ಕೇಂದ್ರದಲ್ಲಿ ಎನ್‌ಡಿಎ ಅಧಿಕಾರಕ್ಕೆ ಬರುವುದೇ ಕನಸು ಎಂದು ತಿರುಗೇಟು ನೀಡಿದ್ದಾರೆ.

ಲೋಕಸಭಾ ಚುನಾವಣೆ ಪೂರ್ಣಗೊಳ್ಳುತ್ತಿದ್ದಂತೆ, ಕರ್ನಾಟಕದಲ್ಲಿ ಸರ್ಕಾರ ಪತನಕ್ಕೆ ಸಮಯ ಸನ್ನಿಹಿತವಾಗಿದೆ. ಇಂತಹ ಸಂದರ್ಭದಲ್ಲಿ ನನ್ನ ನೆರವನ್ನು ರಾಜ್ಯ ಬಿಜೆಪಿ ನಾಯಕರು ಕೋರಿದ್ದಾರೆಂದು ಶಿಂಧೆ ಹೇಳಿಕೆ ನೀಡಿದ್ದಾರೆ.

ಕರ್ನಾಟಕದ ಬಿಜೆಪಿ ಮತ್ತು ಎನ್‌ಡಿಎ ಭಾಗೀದಾರ ಮುಖಂಡರುಗಳು ಈಗಾಗಲೇ ಹಲವಷ್ಟು ಸಭೆ ನಡೆಸಿ, ನನ್ನ ಮತ್ತು ಗೋವಾ ಮುಖ್ಯಮಂತ್ರಿ ಅವರ ಸಹಕಾರ ಕೋರಿದ್ದಾರೆ. ಅಲ್ಲಿನ ಕಾಂಗ್ರೆಸ್‌ನ ಬಹು ಶಾಸಕರು ಬಿಜೆಪಿ ಮುಖಂಡರ ಜೊತೆ ಸಂಪರ್ಕದಲ್ಲಿದ್ದಾರೆ ಎಂದೂ ಶಿಂಧೆ ತಿಳಿಸಿದ್ದರು. ಅವರಿಗೆ ಹಸಿರು ನಿಶಾನೆ ದೊರೆಯುತ್ತಿದ್ದಂತೆ ಪಕ್ಷ ತೊರೆದು ಬಿಜೆಪಿ ಜೊತೆ ಕೈಜೋಡಿಸಲಿದ್ದಾರೆ ಎಂದಿದ್ದರು.

ಇದರ ನಡುವೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಹಾರಾಷ್ಟ್ರ ಮುಖ್ಯಮಂತ್ರಿ ಶಿಂಧೆ ಭ್ರಮೆಯಲ್ಲಿದ್ದಾರೆ ಎಂದು ಖಾರವಾಗಿ ತಿರುಗೇಟು ನೀಡಿದ್ದಾರೆ.

ಯಾವ ಕಾರಣಕ್ಕೂ ಆಪರೇಷನ್ ಕಮಲ ಮಾಡಲು ಆಗುವುದಿಲ್ಲ, ಚುನಾವಣಾ ಸಂದರ್ಭದಲ್ಲಿ ಪ್ರಯತ್ನ ಮಾಡಿ ವಿಫಲರಾಗಿದ್ದಾರೆ. ಮಹಾರಾಷ್ಟ್ರದಲ್ಲಾದಂತೆ ಕರ್ನಾಟಕದಲ್ಲಿ ಆಗುವುದಿಲ್ಲ. ಲೋಕಸಭಾ ಚುನಾವಣೆಯಲ್ಲೂ ಇಂಡಿಯಾ ಮೈತ್ರಿಕೂಟ ಗೆಲ್ಲುತ್ತದೆ ಎಂದು ಹೇಳಿದರು.

ಕರ್ನಾಟಕದಲ್ಲಿ ನಾವು 20 ಸ್ಥಾನ ಗೆಲ್ಲುತ್ತೇವೆ, ಅವರು ಚುನಾವಣೆಯಲ್ಲಿ ಸೋಲುತ್ತಾರೆ. ಅದಕ್ಕೆ ಹತಾಶರಾಗಿ ಸರ್ಕಾರ ಬೀಳಿಸುವ ಹೇಳಿಕೆ ನೀಡುತ್ತಿದ್ದಾರೆ ಎಂದರು.

ಮತ್ತೊಂದೆಡೆ ಸುದ್ದಿಗಾರರೊಂದಿಗೆ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಹಾರಾಷ್ಟ್ರ ಸರ್ಕಾರ ಉಳಿಯುವುದೇ ಸಂಶಯ ಇದೆ, ಅಲ್ಲಿನ ಶಾಸಕರೇ ಯು-ಟರ್ನ್ ಹೊಡೆಯುತ್ತಿದ್ದಾರೆ. ಲೋಕಸಭಾ ಚುನಾವಣೆ ನಂತರ ಅಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರ ಹಿಡಿಯಲಿದೆ ಎಂದರು.

ಶಿವಸೇನೆ ಮತ್ತು ಎನ್‌ಸಿಪಿ ಶಾಸಕರು ಮತ್ತೆ ತಮ್ಮ ಮನೆಗೆ ಹಿಂತಿರುಗುತ್ತಿದ್ದಾರೆ. ಆ ಭಯದಿಂದ ಶಿಂಧೆ ಇಂತಹ ಹೇಳಿಕೆ ನೀಡುತ್ತಿದ್ದಾರೆ ಎಂದು ತಿಳಿಸಿದರು.

## ಮುಸ್ಲಿಂ ಮಹಿಳೆಯರ ಗುರುತು ಖಾತರಿಪಡಿಸಲು ಕೇಳಿದ ಮಾಧವಿ ವಿರುದ್ಧ ಪ್ರಕರಣ

ಹೈದರಾಬಾದ್, ಮೇ 13 - ಮುಸ್ಲಿಂ ಮಹಿಳೆಯ ಗುರುತು ಖಾತರಿ ಪಡಿಸುವಂತೆ ಕೇಳಿದ ಹೈದರಾಬಾದ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಕೆ. ಮಾಧವಿ ಲತಾ ವಿರುದ್ಧ ಚುನಾವಣಾ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ. ಮುಸ್ಲಿಂ ಮಹಿಳೆಯರು ಬುರ್ಖಾ ಧರಿಸಿ ಮತಗಟ್ಟೆಗೆ ಬಂದಿದ್ದರು. ಅವರು ಮುಖ ತೋರಿಸಿ ಗುರುತು ಖಾತರಿಪಡಿಸುವಂತೆ ಲತಾ ಹೇಳಿರುವುದು ವಿಡಿಯೋದಲ್ಲಿ ಕಂಡುಬಂದಿದೆ. ಈ ಬಗ್ಗೆ ಅವರ ವಿರುದ್ಧ ಐಪಿಸಿ ಸೆಕ್ಷನ್‌ಗಳಾದ 171ಸಿ, 186, 505 (1)(ಸಿ) ಹಾಗೂ ಜನಪ್ರತಿನಿಧಿ ಕಾಯ್ದೆ ಸೆಕ್ಷನ್ 132ರ ಅನ್ವಯ ಪ್ರಕರಣ ದಾಖಲಿಸಲಾಗಿದೆ. ಪೂರ್ಣ ಪರಿಶೀಲನೆಯ ನಂತರವೇ ಮತದಾರರನ್ನು ಮತಗಟ್ಟೆಗೆ ಬಿಡುವಂತೆ ಅವರು ಪೊಲೀಸರಿಗೆ ಹೇಳಿರುವುದೂ ವಿಡಿಯೋದಲ್ಲಿದೆ.

## ನಗರದಲ್ಲಿ ನಾಳೆ ಕುರಿ, ಮೇಕೆ ಸಾಕಾಣಿಕೆ ತರಬೇತಿ

ದಾವಣಗೆರೆ, ಮೇ 13- ನಗರದ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಕುರಿ - ಮೇಕೆ ಸಾಕಾಣಿಕೆ ತರಬೇತಿಯನ್ನು ನಾಡಿದ್ದು ದಿನಾಂಕ 15 ಮತ್ತು 16 ರಂದು ಆಯೋಜಿಸಲಾಗಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

## ಜಿ.ಎಂ. ವಿಶ್ವವಿದ್ಯಾಲಯದಲ್ಲಿ ಇಂದಿನಿಂದ ಅಂತರರಾಷ್ಟ್ರೀಯ ವಿಚಾರ ಸಂಕಿರಣ

ದಾವಣಗೆರೆ ಜಿ.ಎಂ. ವಿಶ್ವವಿದ್ಯಾಲಯದ ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ವತಿಯಿಂದ ನಾಳೆ ದಿನಾಂಕ 14ರಿಂದ ಮೂರು ದಿನಗಳ ಅಂತರರಾಷ್ಟ್ರೀಯ ವಿಚಾರ ಸಂಕಿರಣ ಆಯೋಜಿಸಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿರುವ ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ಮುಖ್ಯಸ್ಥ ಬಸವರಾಜ ಸ್ವಾಮಿ, 'ವಾಣಿಜ್ಯ ಶಿಕ್ಷಣ - ಗಡಿ ದಾಟಿ ಸಂಪರ್ಕ - ಭವಿಷ್ಯ ರೂಪಿಸುವುದು' ಎಂಬ ವಿಷಯದ ಕುರಿತು ಸಂಕಿರಣ ನಡೆಯಲಿದೆ ಎಂದು ಹೇಳಿದರು.

ನಾಳೆ ದಿನಾಂಕ 14ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ವಿಶ್ವವಿದ್ಯಾಲಯದ ಜಿ.ಎಂ. ಹಾಲಮ್ಮ ಸಭಾಂಗಣದಲ್ಲಿ ಉದ್ಘಾಟನಾ ಕಾರ್ಯಕ್ರಮ ನೆರವೇರಲಿದೆ. ಜಿ.ಎಂ. ವಿಶ್ವವಿದ್ಯಾಲಯದ ಉಪ ಕುಲಪತಿ ಎಸ್.ಆರ್. ಶಂಕಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ.

ಬ್ರಿಟನ್‌ನ ಲಂಡನ್ ಸೌತ್ ಬ್ಯಾಂಕ್ ವಿಶ್ವವಿದ್ಯಾಲಯದ ಉಪನ್ಯಾಸಕರಾದ ಲೆಬರ್ನ್ ರೋಸ್ ಹಾಗೂ ಲಾರೆನ್ಸ್ ಫಿಶರ್ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ಬಾಷ್ ಇಂಡಿಯಾ ಫೌಂಡೇಷನ್‌ನ ಮಾಜಿ ಮುಖ್ಯಸ್ಥ ಓ.ಪಿ. ಗೋಯಲ್, ವಿಶ್ವೇಶ್ವರಾಯ ವಿಶ್ವವಿದ್ಯಾಲಯದ ಎಂ.ಬಿ.ಎ. ವಿಭಾಗದ ಅಧ್ಯಕ್ಷ ಎಂ.ಎಂ. ಮುನ್ನಿ, ಲಂಡನ್ ಸೌತ್ ಬ್ಯಾಂಕ್ ವಿಶ್ವವಿದ್ಯಾಲಯದ ಉಪನ್ಯಾಸಕಿ ಪೂರ್ಣಿಮಾ ಚರಂತಿಮಠ್ ಅವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲಿದ್ದಾರೆ.

ಸಂಕಿರಣದಲ್ಲಿ ಪಾಲ್ಗೊಳ್ಳಲು ಬಯಸುವವರು ವೆಬ್ ತಾಣವಾದ www.gmu.ac.in ಇಲ್ಲವೇ ಮೊ : 88004 41841 ಸಂಪರ್ಕಿಸಬಹುದು ಎಂದು ಬಸವರಾಜ ಸ್ವಾಮಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಜಿ.ಎಂ. ವಿಶ್ವವಿದ್ಯಾಲಯದ ತರಬೇತಿ ಹಾಗೂ ಉದ್ಯೋಗ ವಿಭಾಗದ ಮುಖ್ಯಸ್ಥ ತೇಜಸ್ವಿ ಕಟ್ಟಿಮನಿ, ವಾಣಿಜ್ಯ ಹಾಗೂ ನಿರ್ವಹಣಾ ವಿಭಾಗದ ನಿರ್ದೇಶಕ ಶಿವಕುಮಾರ್, ಎಂ.ಬಿ.ಎ. ವಿಭಾಗದ ಮುಖ್ಯಸ್ಥ ಪಿ.ಎಸ್. ಬಸವರಾಜ್ ಉಪಸ್ಥಿತರಿದ್ದರು.

## ಉಪ್ಪಾರ ಸಮಾಜದ ತಾಲ್ಲೂಕು ಅಧ್ಯಕ್ಷರಾಗಿ ಎಂ.ಮಾರಪ್ಪ

**ಹರಪನಹಳ್ಳಿ**

ಹರಪನಹಳ್ಳಿ, ಮೇ 13- ಉಪ್ಪಾರ ಸಮಾಜದ ನೂತನ ತಾಲ್ಲೂಕು ಅಧ್ಯಕ್ಷರಾಗಿ ತಾಲ್ಲೂಕಿನ ತಿಪ್ಪನಾಯಕನಹಳ್ಳಿ ಗ್ರಾಮದ ಎಂ.ಮಾರಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದ ಮೇಗಳ ಉಪ್ಪಾರಗೇರಿ ಭಗೀರಥ ಸಮುದಾಯದ ಭವನದಲ್ಲಿ ಭಾನುವಾರ ನಡೆದ ಸಭೆಯಲ್ಲಿ ಸಮಾಜದ ನೂತನ ತಾಲ್ಲೂಕು ಅಧ್ಯಕ್ಷರು ಸೇರಿದಂತೆ ತಾಲ್ಲೂಕು ಸಮಿತಿ ರಚನೆ ಮಾಡಲಾಯಿತು.



ತಾಲ್ಲೂಕು ಉಪಾಧ್ಯಕ್ಷರಾಗಿ ಎರಡೆತ್ತಿನಹಳ್ಳಿ ಬಣಕಾರ್ ರಾಜಪ್ಪ, ಯಲ್ಲಾಪುರ ಎಸ್. ಎಸ್.ಬಸವರಾಜ್, ಜೋಷಿಲಿಂಗಾಪುರ ಎಸ್. ಕೆ.ನಿಂಗಪ್ಪ ಆಯ್ಕೆಯಾಗಿದ್ದಾರೆ.

ಪ್ರಧಾನ ಕಾರ್ಯದರ್ಶಿಯಾಗಿ ತಲುವಾಗಲು ಪ್ರವೀಣಕುಮಾರ್, ಸಹ ಕಾರ್ಯದರ್ಶಿಯಾಗಿ ಮೇಗಳ ಉಪ್ಪಾರಗೇರಿ ಎಸ್.ಹನುಮಂತ, ದ್ಯಾಪನಾಯಕನಹಳ್ಳಿ ಶಿವರಾಜ್, ಪಿಟ್ರಿ ಗೋಣಿಬಸಪ್ಪ, ಸಂಘಟನಾ ಕಾರ್ಯದರ್ಶಿಯಾಗಿ ಜೆ.ದುರುಗಪ್ಪ, ಚಿರಸ್ತಳ್ಳಿ ಶಿವರಾಜ್, ತಿಪ್ಪನಾಯಕನಹಳ್ಳಿ ಜಿ. ಭರ್ಲಿಂಗಪ್ಪ, ಗುಡಿ ಆನಂದ ಆಯ್ಕೆಯಾಗಿದ್ದಾರೆ.

ಕಾನೂನು ಸಲಹೆಗಾರರಾಗಿ ಹೆಚ್. ಶಿವರಾಜ್, ಖಜಾಂಜಿಯಾಗಿ ಯಲ್ಲಾಪುರ ದೇವರಾಜ್ ಇವರನ್ನು ಆಯ್ಕೆ ಮಾಡಲಾಯಿತು ಎಂದು ನೂತನ ತಾಲ್ಲೂಕು ಅಧ್ಯಕ್ಷ ಎಂ. ಮಾರಪ್ಪ ತಿಳಿಸಿದರು.

ಈ ಸಂದರ್ಭದಲ್ಲಿ ಸಮಾಜದ ಗೌರವ ಅಧ್ಯಕ್ಷ ಶಂಕರನಹಳ್ಳಿ ಜಿ.ಹನುಮಂತಪ್ಪ ಮುಖಂಡರಾದ ಬಣಕಾರ್ ಮಂಜಪ್ಪ, ಮಂಜಣ್ಣ, ಎರಡೆತ್ತಿನಹಳ್ಳಿ ಬಿ.ಪರಸಪ್ಪ, ನಾಗರಾಜಪ್ಪ, ಬಸವರಾಜ ಶೃಂಗಾರತೋಟ, ಹರಾಳ ಮೂಗಪ್ಪ, ಪರಸಪ್ಪ, ಎನ್. ಹನುಮಂತ, ಚಂದ್ರು, ಓಬಳಾಪುರ ಪ್ರಸನ್ನ, ಮಹೇಶ ಸೇರಿದಂತೆ ಇತರರು ಇದ್ದರು.

## 70 ಟ್ರಕ್ ತುಂಬುವಷ್ಟು ಹಣ ವಶ

**(5ನೇ ಪುಟದಿಂದ)** ಕೇವಲ 35 ಲಕ್ಷ ರೂ. ನಗದು ವಶಪಡಿಸಿಕೊಂಡಿತ್ತು. ಇದನ್ನು ಶಾಲಾ ಚೀಲವೊಂದರಲ್ಲಿ ತುಂಬಬಹುದಿತ್ತು. ನಾವು ಅಧಿಕಾರ ವಹಿಸಿಕೊಂಡ ನಂತರ ಜಾರಿ ನಿರ್ದೇಶನಾಲಯವು 2,200 ಕೋಟಿ ರೂ.ಗಳ ಹಣ ವಶಪಡಿಸಿಕೊಂಡಿದೆ. ಇದನ್ನು ತುಂಬಲು 70 ಸಣ್ಣ ಟ್ರಕ್‌ಗಳು ಬೇಕು ಎಂದು ಮೋದಿ ಹೇಳಿದರು.

ನನ್ನ ವಿರೋಧಿಗಳು ತಮ್ಮ ಸಂತಾನ ಬೆಳೆಸುವ ಬಗ್ಗೆ ಆಸಕ್ತಿ ಹೊಂದಿದ್ದಾರೆ. ನನಗೆ ಯಾವುದೇ ವಾರಸುದಾರರಿಲ್ಲ. ಜನ ಸಾಮಾನ್ಯರೇ ನನ್ನ ವಾರಸುದಾರರು ಎಂದೂ ಅವರು ಹೇಳಿದರು.

ಕಾಂಗ್ರೆಸ್ ಹಾಗೂ ಆರ್‌ಜೆಡಿಯಂತಹ ಪಕ್ಷಗಳು ಅಧಿಕಾರದಲ್ಲಿದ್ದಾಗ ಹಣ ವಸೂಲಿ ಹಾಗೂ ಅಪಹರಣಕ್ಕೆ ಅವಕಾಶ ನೀಡಿದ್ದವು. ಅವರು ಮುಸ್ಲಿಮರಿಗೆ ಮೀಸಲಾತಿ ಕೊಟ್ಟಿದ್ದರು, ವೋಟ್ ಬ್ಯಾಂಕ್ ರಾಜಕೀಯ ಮಾಡಿದ್ದರು. ನಾನು ಬದುಕಿರುವವರೆಗೂ ಹೀಗಾಗಲು ಬಿಡುವುದಿಲ್ಲ ಎಂದು ಮೋದಿ ಹೇಳಿದರು.

ಆರ್‌ಜೆಡಿ ಬಿಹಾರದಲ್ಲಿ ಅಧಿಕಾರದಲ್ಲಿದ್ದಾಗ ಅಪಹರಣ ಹಾಗೂ ವಸೂಲಿ ವ್ಯಾಪಕವಾಗಿತ್ತು. ಆದರೆ, ಎನ್.ಡಿ.ಎ. ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ನಡೆಸುತ್ತಿದೆ. ಕೇಂದ್ರದ ಸಚಿವರಲ್ಲಿ ಶೇ.60ರಷ್ಟು ಜನರು ಒ.ಬಿ.ಸಿ, ಪರಿಶಿಷ್ಟ ಜಾತಿ ಹಾಗೂ ಪಂಗಡಕ್ಕೆ ಸೇರಿದವರು ಎಂದು ಹಳಿದರು.


|| ಶ್ರೀ ಹುಲಿಗೆಮ್ಮ ದೇವಿ ಪ್ರಸನ್ನ || ಶ್ರೀ ದುರ್ಗಾಂಬಿಕಾದೇವಿ ಪ್ರಸನ್ನ || ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ ||



**ಕೈಲಾಸ ಸಮಾರಾಧನೆ ಆಹ್ವಾನ**

ದಿ. ಶ್ರೀ ಮಡಿವಾಳರ ಪೂಜಾರ ಕೆಂಚಪ್ಪ ಇವರ ಮಕ್ಕಳಾದ ಶ್ರೀಮತಿ ಗಂಗಮ್ಮ, ಶ್ರೀ ಮುರುಗೇಶ್ ಮತ್ತು ಶ್ರೀಮತಿ ನಿರ್ಮಲಮ್ಮ, ಶ್ರೀ ಸುರೇಶ್ ಚಿಕ್ಕನಹಳ್ಳಿ ಹೊಸಬಡಾವಣೆ, ನಿಟುವಳ್ಳಿ ದಾವಣಗೆರೆ. ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 6.05.2024ನೇ ಸೋಮವಾರ ಬೆಳಿಗ್ಗೆ 10.50ಕ್ಕೆ ನಮ್ಮ ಪೂಜ್ಯ ತಾಯಿಯವರಾದ

**ಶ್ರೀಮತಿ ಗೌರಮ್ಮನವರು**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಸಮಾರಾಧನೆಯನ್ನು** ದಿನಾಂಕ 14.05.2024ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ಸಿಟಿ ನಿಟುವಳ್ಳಿ, ಚಿಕ್ಕನಹಳ್ಳಿ ಹೊಸ ಬಡಾವಣೆಯಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು - ಹಿರಿಯರು ನಿಶ್ಚಯಿಸಿರುತ್ತಾರೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು : ಶ್ರೀಮತಿ ಗಂಗಮ್ಮ, ಶ್ರೀ ಮುರುಗೇಶ್ ಮತ್ತು ಶ್ರೀಮತಿ ನಿರ್ಮಲಮ್ಮ, ಶ್ರೀ ಸುರೇಶ್ ಮತ್ತು ಮಕ್ಕಳು, ಶ್ರೀಮತಿ ರೇಣುಕಮ್ಮ ಹಾಗೂ ಬಂಧು-ಮಿತ್ರರು. ಮೊ : 97384 76931, 89702 02504**

ವಿ.ಸೂ : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.



**ಪುಣ್ಯಸ್ಮರಣೆ**



ಜನನ : 07.01.1951 ಲಿಂಗೈಕ್ಯ : 14.05.2020

**ದಿ. ಶ್ರೀಮತಿ ಎ.ಸಿ. ಶ್ಯಾಮಲ**

ಅಮ್ಮ ನೀವಿಲ್ಲದೆ ಇಂದಿಗೆ ನಾಲ್ಕು ವರ್ಷ

ಸದಾ ಸ್ಮರಣೆಯಲ್ಲಿರುವ...

**ನಿಮ್ಮ ಕುಟುಂಬ**


## ವಿಕಲಚೇತನರಿಗೆ ಕೌಶಲ್ಯಾಭಿವೃದ್ಧಿ ತರಬೇತಿ

ದಾವಣಗೆರೆ, ಮೇ 13- ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀ ಕರಣ ಇಲಾಖೆ ವತಿಯಿಂದ ವಿಕಲಚೇತನ ಯುವಕ, ಯುವತಿಯರಿಗೆ ಕೌಶಲ್ಯಾಭಿ ವೃದ್ಧಿ ತರಬೇತಿ ನೀಡಲಾಗು ವುದು. 18 ರಿಂದ 40 ವರ್ಷ ವಯೋಮಾನದ ವಿಕಲ ಚೇತನರು ಕಂಪ್ಯೂಟರ್ (ಡಾಟಾ ಎಂಟ್ರಿ ಆಪರೇಟರ್) ತರಬೇತಿ, ಮೊಬೈಲ್ ರಿಪೇರಿ, ತೋಟಗಾರಿಕೆ, ನರ್ಸರಿ ಇತ್ಯಾದಿ ಅರ್ಜಿ ಸಲ್ಲಿಸಬಹುದು. ತರಬೇತಿ ಅವಧಿಯಲ್ಲಿ ಊಟ, ವಸತಿ ಉಚಿತವಾಗಿ ನೀಡಲಾಗುವುದು. ಮೇ 25 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಹೊನ್ನಾಳಿ ಶೈಲಜಾ ಕೆ.ಎಂ. (9886366809), ಚನ್ನಗಿರಿಯ ಸುಬ್ರಮಣ್ಯಂ (9945738141), ಜಗಳೂರು ಎಂ. ಕೆ ಶಿವನಗೌಡ (9902105734), ಹರಿಹರ ಶಶಿಕಲಾ ಟಿ. (9945458058), ದಾವಣಗೆರೆ ಚನ್ನಪ್ಪ. ಬಿ (9590829024) ಸಂಪರ್ಕಿಸಬೇಕೆಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾಧಿಕಾರಿ ಡಾ. ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

## ನಿಟ್ಟೂರು : ಇಂದಿನಿಂದ ಗ್ರಾಮದೇವತೆ ಹಬ್ಬ



ಮಲೇಬೆನ್ನೂರು ಸಮೀಪದ ನಿಟ್ಟೂರು ಗ್ರಾಮದ ಗ್ರಾಮದೇವತೆ ಶ್ರೀ ಮಾರಿಕಾಂಬಾ ದೇವಿಯ ಜಾತ್ರಾ ಮಹೋತ್ಸವವು ಇಂದಿನಿಂದ ಇದೇ ದಿನಾಂಕ 17 ರವರೆಗೆ ಸಂಭ್ರಮದಿಂದ ಜರುಗಲಿದೆ. ಹಲವು ವರ್ಷಗಳ ನಂತರ ನಡೆಯುತ್ತಿರುವ ಗ್ರಾಮದೇವತೆ ಹಬ್ಬಕ್ಕೆ ಗ್ರಾಮ ನವ ವಧುವಿನಂತೆ ಸಿಂಗಾರ ಗೊಂಡಿದ್ದು, ವಿದ್ಯುತ್ ದೀಪಾಲಂಕಾರಗಳಿಂದ ಝಗಮಗಿಸುತ್ತಿದೆ. ಇಂದು ಗ್ರಾಮ ದೇವತೆಗೆ ಉಡಿ ತುಂಬುವ ಕಾರ್ಯಕ್ರಮವಿದ್ದು, ರಾತ್ರಿ ಗ್ರಾಮದಲ್ಲಿ ದೇವತೆಯ ಉತ್ಸವ ಇರುತ್ತದೆ.

## ಸಿಬಿಎಸ್‌ಇ ಫಲಿತಾಂಶ : ಮಾಗನೂರು ಬಸಪ್ಪ ಶಾಲೆಗೆ ಶೇ.100 ಫಲಿತಾಂಶ

ದಾವಣಗೆರೆ, ಮೇ 13- ನಗರದ ಮಾಗನೂರು ಬಸಪ್ಪ ಶಾಲೆಯ 2023-24ನೇ ಸಾಲಿನ ಸಿಬಿಎಸ್‌ಇ 10ನೇ ತರಗತಿ ಫಲಿತಾಂಶದಲ್ಲಿ ಶೇ.100 ಫಲಿತಾಂಶ ಲಭಿಸಿದ್ದು, ಶಾಲೆಯ ಕೆ.ಯುಕ್ತ (ಶೇ 93.2), ಎಸ್.ಎ.ಸಮರ್ಥ್ ಕುಮಾರ್ (ಶೇ.93.0), ಜಿ.ಆರ್.ಓಂಕಾರ್ (ಶೇ.92.0), ಬಿ.ಎನ್.ವರ್ಣ (ಶೇ.90.2), ಜಿ.ಪಿ.ಕಿಶನ್ (ಶೇ.89.4), ಬಿ.ಕೆ.ಯೋಗಿತಾ (ಶೇ.89.2), ಯು.ವರ್ಷಿತಾ (ಶೇ.87.6), ವಿ.ಶ್ರಾವಣಿ ಸಾಯಿ (ಶೇ.87.4), ನಯನ ಪಿ. ತೆವರಿ (ಶೇ.87.0), ಬಿ.ಜಿ.ರುದ್ರೇಶ್ (ಶೇ.87.0), ಆಯುಷ್ ಎಸ್. ಪಾಟೀಲ್ (85.2) ಈ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

## ತಹಶೀಲ್ದಾರ್ ಕಚೇರಿಯಲ್ಲಿ ಬಸವೇಶ್ವರ ಜಯಂತಿ




**ಹರಿಹರ**

ಹರಿಹರ, ಮೇ 12 - ನಗರದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಜಗಜ್ಯೋತಿ ಬಸವೇಶ್ವರ ಮತ್ತು ಹೇಮರೆಡ್ಡಿ ಮಲ್ಲಮ್ಮನ ಜಯಂತಿ ಆಚರಿಸಲಾಯಿತು.

ಕದಳಿ ಮಹಿಳಾ ವೇದಿಕೆಯವರು ವಚನ ಗಾಯನ ಮಾಡಿದರು. ಅನೇಕರು ಬಸವಣ್ಣನವರ ಹಾಗೂ ಹೇಮರೆಡ್ಡಿ ಮಲ್ಲಮ್ಮನ ಆದರ್ಶ ಮತ್ತು ವಿಚಾರಧಾರೆಯನ್ನು ಪ್ರಸ್ತುತ ಪಡಿಸಿದರು.

ಈ ವೇಳೆ ಗ್ರೇಡ್-2 ತಹಶೀಲ್ದಾರ್ ಶಶಿಧರಯ್ಯ, ತಾ.ಪಂ ಇಓ ರಾಮಕೃಷ್ಣಪ್ಪ, ಬಿಇಓ ಹನುಮಂತಪ್ಪ, ಬಸವರಾಜಯ್ಯ, ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಡಿ.ಜಿ. ಶಿವಾನಂದಪ್ಪ, ಬಸವರಾಜ್ ಓಂಕಾರಿ, ವೀರೇಶ್ ಯಾದವಾಡ್, ಜಿ.ಕೆ. ಮಲ್ಲಿಕಾರ್ಜುನ, ಕರಿಬಸಪ್ಪ ಕಂಚಿಕೇರಿ, ಅಕ್ಕಿ ರಾಜಣ್ಣ, ಕದಳಿ ಮಹಿಳಾ ವೇದಿಕೆಯ ರೂಪಾ ಕುರುವತ್ತಿ, ಸುನೀತಾ ಮಾರಳ್ಳಿ, ಪ್ರೇಮಾ, ಶಂಕುತಲಾ, ಭಾರತಿ, ಶಿವಲಿಂಗಮ್ಮ, ಮೀನಾಕ್ಷಿ, ಹನುಮಂತ ರೆಡ್ಡಿ, ಮಂಜುನಾಥ್ ರೆಡ್ಡಿ, ಕೃಷ್ಣ ರೆಡ್ಡಿ, ಬಸಪ್ಪ ರೆಡ್ಡಿ, ಗಿರಿಗೌಡ, ಕೊಟ್ರೇಶ್ ರೆಡ್ಡಿ, ಮಲ್ಲಪ್ಪ ರೆಡ್ಡಿ, ಶ್ರೀನಿವಾಸ್ ರೆಡ್ಡಿ, ಸಂತೋಷ್, ಸೋಮಶೇಖರ್ ಇದ್ದರು.

## ಮಲೇಬೆನ್ನೂರಿನ ರಾಜ ರಾಜೇಶ್ವರಿ ವಿದ್ಯಾಸಂಸ್ಥೆಗೆ ಉತ್ತಮ ಫಲಿತಾಂಶ

ಮಲೇಬೆನ್ನೂರು, ಮೇ 12- ಪಟ್ಟಣದ ಜಿಗಳಿ ರಸ್ತೆಯ ರಾಜ ರಾಜೇಶ್ವರಿ ಆಂಗ್ಲ ಮಾಧ್ಯಮ ವಿದ್ಯಾ ಸಂಸ್ಥೆಗೆ 2023-24ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಲಭಿಸಿದೆ ಎಂದು ಸಂಸ್ಥೆಯ ಪ್ರಾಚಾರ್ಯೆ ಜಿ.ಓ ಸುಜಾತ ತಿಳಿಸಿದ್ದಾರೆ.

ಪರೀಕ್ಷೆ ಎದುರಿಸಿದ 21 ವಿದ್ಯಾರ್ಥಿಗಳ ಪೈಕಿ 5 ಮಕ್ಕಳು ಡಿಸ್ಟಿಂಕ್ಷನ್, 11 ಮಕ್ಕಳು ಪ್ರಥಮ ಶ್ರೇಣಿಯಲ್ಲಿ ಉತೀರ್ಣರಾಗಿದ್ದು, ಸಿ. ಪ್ರಿಯದರ್ಶಿನಿ 575 ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ ಗಳಿಸಿದ್ದಾರೆ.

ಎಂ.ಎಂ. ತೇಜಸ್ವಿನಿ (ಶೇ.91.36), ಕೃಪಾ ಪಾಟೀಲ್ (ಶೇ.91.04), ರುಮಾನಾ ಫರ್ಜಿನ್ (ಶೇ.86.08), ಸುನಿಧಿ ಎ. ಆರ್ (ಶೇ.82) ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಕೃಪಾ ಪಾಟೀಲ್ ಸಮಾಜ ವಿಜ್ಞಾನದಲ್ಲಿ 100 ಕ್ಕೆ 100, ಎಂ.ಎಂ. ತೇಜಸ್ವಿನಿ ಕನ್ನಡದಲ್ಲಿ 125 ಕ್ಕೆ 124 ಪಡೆದಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯು ಮೆಚ್ಚುಗೆ ವ್ಯಕ್ತಪಡಿಸಿದೆ.

## ಡಿಪ್ಲೋಮಾ ಕೋರ್ಸ್ ಪ್ರವೇಶಕ್ಕಾಗಿ ಅರ್ಜಿ

ದಾವಣಗೆರೆ, ಮೇ 13- ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ ಲ್ಯಾಟರಲ್‌ಎಂಟ್ರಿ ಮುಖಾಂತರ ನೇರವಾಗಿ 2 ನೇ ಡಿಪ್ಲೋಮಾ (ಡಿ.ಹೆಚ್.ಟಿ.ಟಿ) ಕೋರ್ಸ್ ಪ್ರವೇಶಕ್ಕಾಗಿ 27 ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳು ರೂ. 2500/- ರಂತೆ ಶಿಷ್ಯವೇತನ ನೀಡಲಾಗುವುದು. ಆಯ್ಕೆಯಾದ ಪುರುಷ ಅಭ್ಯರ್ಥಿಗಳಿಗೆ ಆಯಾ ಐ.ಐ.ಹೆಚ್.ಟಿ ನಿಯಮಾನುಸಾರ ಕಲ್ಪಿಸಲಾಗುವುದು. ಅರ್ಜಿ ಸಲ್ಲಿಸಲು ಮೇ.31 ಕೊನೆಯ ದಿನವಾಗಿರುತ್ತದೆ. ವಿವರಗಳಿಗಾಗಿ ಮತ್ತು ಅರ್ಜಿ ಫಾರಂಗಳಿಗಾಗಿ ಈ ಕಚೇರಿಯ ದೂರವಾಣಿ 08192-262362 ಯನ್ನು ಸಂಪರ್ಕಿಸಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಪ್ರಾಂಶುಪಾಲರು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ನರಸಾಪೂರ, ಗದಗ - ಬೆಟಗೇರಿ - 587 102, (ಕರ್ನಾಟಕ) ಇವರಿಗೆ ನೇರವಾಗಿ ಸಲ್ಲಿಸಬೇಕು.

## ಸಿದ್ಧಗಂಗಾ ಶಾಲೆಗೆ ಶೇ.100ರ ಫಲಿತಾಂಶ









ದಾವಣಗೆರೆ, ಮೇ 13- ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ನಡೆದ 10ನೇ ತರಗತಿಯ ಸಿಬಿಎಸ್‌ಇ ಪರೀಕ್ಷೆಯಲ್ಲಿ ನಗರದ ಸಿದ್ಧಗಂಗಾ ಶಾಲೆಗೆ ಶೇ.100ರ ಫಲಿತಾಂಶ ಲಭಿಸಿದೆ.

ಶಾಲೆಯ 20 ಮಕ್ಕಳು ಅತ್ಯುನ್ನತ ಶ್ರೇಣಿ, 55 ಮಕ್ಕಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ಪ್ರೊಫೆಸರ್ ಡಿ. ರವಿಕುಮಾರ್ ಮತ್ತು ವಿ.ಸಿ ಉಷಾ ಅವರ ಪುತ್ರ ಆರ್. ಧ್ರುವ ಕುಮಾರ್ ರೆಡ್ಡಿ 500ಕ್ಕೆ 474 ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಎಚ್.ಎಂ. ತೇಜಸ್ವಿನಿ (460), ಎನ್. ಲಕ್ಷ್ಮೀ 458 ಅಂಕ ಪಡೆದ ಇವರು ಮೊದಲ ಮೂರು ಸ್ಥಾನ ಗಳಿಸಿದ್ದಾರೆ.


**ಇಪ್ಪತ್ತೆರಡನೇ ವರ್ಷದ ಪುಣ್ಯಸ್ಮರಣೆ**

ದಿ. ಬಿ.ಎಸ್. ಕರಿಬಸಪ್ಪ ಎ. ಬುಳ್ಳಾಪುರ — ನಿಧನ 14.5.2002

ದಿ. ಹೆಚ್.ಎಂ. ನಾಗರಾಜ್ ಹೆಬ್ಬಾಳ್ — ನಿಧನ 14.5.2002

ಹೂವಾಗಿ ಅರಳುವ ಮೊದಲೇ ವಿಧಿಯಾಟಕ್ಕೆ ಬಲಿಯಾದ ಶ್ರಮ ಜೀವಿ **ಶ್ರೀಯುತ ಬಿ.ಎಸ್. ಕರಿಬಸಪ್ಪ** ಮತ್ತು ಸದಾ ಹಸನ್ಮುಖಿಯಾಗಿದ್ದ **ಶ್ರೀ ಹೆಚ್.ಎಂ. ನಾಗರಾಜ್**

ನೀವಿಬ್ಬರೂ ನಮ್ಮನ್ನಗಲಿ ಇಂದಿಗೆ 22 ವರ್ಷಗಳಾದರೂ ನಿಮ್ಮ ಆದರ್ಶಗಳು, ಸ್ನೇಹ, ಶ್ರಮ ಮತ್ತು ವ್ಯಕ್ತಿತ್ವಗಳು ನಮಗೆಲ್ಲಾ ಮಾದರಿಯಾಗಿವೆ. ನಾವುಗಳು ನೀವು ಹಾಕಿಕೊಟ್ಟ ದಾರಿಯಲ್ಲಿ, ನಿಮ್ಮಗಳ ನೆನಪಿನ ದೋಣಿಯಲ್ಲಿ, ಸದಾ ನಿಮ್ಮ ನೆನಪಿನಲ್ಲೇ ಜೀವನ ಸಾಗಿಸುತ್ತಿರುವ ಕುಟುಂಬ ವರ್ಗವು ನಿಮ್ಮಗಳ ದಿವ್ಯಾತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುವ,

**ದುಃಖತಪ್ತ ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು, ಹೆಬ್ಬಾಳು ಮತ್ತು ಎ. ಬುಳ್ಳಾಪುರ, ದಾವಣಗೆರೆ ತಾಲ್ಲೂಕು.**


## ಬಳಪದ ಕಲ್ಲಿನ ಗೋಪುರಕ್ಕೆ ಭಕ್ತರಿಂದ ತೈಲಾಭಿಷೇಕ

**(5ನೇ ಪುಟದಿಂದ)** ಸಂಪ್ರದಾಯ. ಅವರು ಕಳಿಸಿದ ತೈಲವನ್ನು ಮೊದಲಿಗೆ ಸ್ವಾಮಿಯ ಶಿಖರಕ್ಕೆ ಎರೆದ ನಂತರ ಉಳಿದ ಭಕ್ತರ ತೈಲವನ್ನು ಶಿಖರಕ್ಕೆ ಎರೆಯಲಾಗುವುದು.

ಪ್ರತಿವರ್ಷ ಜರ್ಮಲಿ ರಾಜರ ವಂಶಸ್ಥರು ನೇಮ, ನಿಷ್ಠೆ, ವ್ರತ, ಉಪವಾಸದಿಂದ ನಡೆದು ಬಂದು ತಂದ ತೈಲವನ್ನು ಶಿಖರಕ್ಕೆ ಸುರಿದ ಆನಂತರವೇ ಭಕ್ತರು ಹರಕೆಯಂತೆ ನೀಡಿದ ತೈಲವನ್ನು ಶಿಖರದ ಮೇಲೆ ಸುರಿಯುತ್ತಾರೆ.

ಇದು ಬಳಪದ ಕಲ್ಲಿನ ಗೋಪುರವಾಗಿದ್ದು, ಸೂಕ್ಷ್ಮ ಕೆತ್ತನೆಗಳ ಕಲೆ ಇದೆ. ಈ ಕಲೆ ಬಿಸಿಲು, ಮಳೆ, ಗಾಳಿಗೆ, ಹಾಳಾಗಬಾರದೆಂಬ ಉದ್ದೇಶದಿಂದ ಪ್ರತಿವರ್ಷ ಶಿಖರಕ್ಕೆ ತೈಲ ಮಜ್ಜನ ಮಾಡುವ ಮೂಲಕ ಅಪರೂಪದ ಕಲಾಸಂಪತ್ತು ಉಳಿಸುವ ಉದ್ದೇಶ ಇದಾಗಿದೆ ಎಂಬುದು ವಿಚಾರವಂತರು, ಕೆಲವು ಇತಿಹಾಸಕಾರ ಅಭಿಪ್ರಾಯ. ಶಿಖರ ತೈಲಾಭಿಷೇಕ ಕಣ್ತುಂಬಿಸಿಕೊಳ್ಳಲು ಪ್ರತಿವರ್ಷ ಲಕ್ಷಗಟ್ಟಲೇ ಭಕ್ತರು ಆಚರಣೆ ನೋಡಲು ಬರುತ್ತಾರೆ.

ನೆರೆದ ಭಕ್ತ ಸಮೂಹವು ಕಣ್ತುಂಬಿಕೊಂಡು ಭಕ್ತಿಯಿಂದ ನಮಿಸಿದರು.ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

## ಡಿಪ್ಲೋಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಮೇ 13 - ಪ್ರಸಕ್ತ ಸಾಲಿನ ರಾಜ್ಯದ ಸರ್ಕಾರಿ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶಕ್ಕೆ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕನಿಷ್ಠ ಶೇ.35 ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು www.dte.kar.nic.in ಅಥವಾ www.kea.kar.nic.in ವೆಬ್ ಸೈಟ್ ಮೂಲಕ ಅರ್ಜಿ ಪಡೆದು ಅಗತ್ಯ ದಾಖಲಾತಿಗಳೊಂದಿಗೆ ಇದೇ ದಿನಾಂಕ 21ರೊಳಗಾಗಿ ಕಚೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರು, ಡಿ.ಆರ್.ಆರ್ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು, ದಾವಣಗೆರೆ ಇವರನ್ನು ಸಂಪರ್ಕಿಸಲು ಕೋರಲಾಗಿದೆ.

## ರಾಣೇಬೆನ್ನೂರಿನಲ್ಲಿ ಇಂದು ರೈತರ ಸಭೆ

ಸರ್ಕಾರ ಬಿಡುಗಡೆ ಮಾಡಿರುವ ಬಾಕಿ ಬೆಳೆ ನಷ್ಟ ಪರಿಹಾರವು ಬ್ಯಾಂಕ್ ಖಾತೆಯೊಂದಿಗೆ ಆಧಾರ್ ಜೋಡಣೆ ಮಿಸ್ ಮ್ಯಾಚಿಂಗ್ ಸಮಸ್ಯೆಯಿಂದ ರೈತರ ಖಾತೆಗೆ ಹಣ ಜಮಾ ಆಗದೇ ಸಾವಿರಾರು ರೈತರು ಈ ಯೋಜನೆ ಯಿಂದ ವಂಚಿತರಾಗುತ್ತಿದ್ದು, ಜಿಲ್ಲಾಡಳಿತ ದಿವ್ಯ ನಿರ್ಲಕ್ಷ್ಯ ವಹಿಸಿದೆ ಎಂದು ರಾಜ್ಯ ರೈತ ಸಂಘದ ಸಂಘಟನಾ ಕಾರ್ಯದರ್ಶಿ ರವೀಂದ್ರಗೌಡ ಎಫ್. ಪಾಟೀಲ ಮತ್ತು ಜಿಲ್ಲಾಧ್ಯಕ್ಷ ಈರಣ್ಣ ಹಲಗೇರಿ ದೂರಿದ್ದಾರೆ.

ಜಿಲ್ಲಾಧಿಕಾರಿಗಳು ಮತ್ತು ಜಂಟಿ ಕೃಷಿ ನಿರ್ದೇಶಕರು ಕೂಡಲೇ ಮಧ್ಯ ಪ್ರವೇಶಿಸಿ ತಾಂತ್ರಿಕ ದೋಷ ಸರಿಪಡಿಸುವಂತೆ ಒತ್ತಾಯಿಸಿ, ಇಂದು ಬೆಳಿಗ್ಗೆ 10.30 ಕ್ಕೆ ಕೆ.ಇ.ಬಿ. ವಿನಾಯಕ ದೇವಸ್ಥಾನದ ಹತ್ತಿರ ರೈತರೆಲ್ಲರ ತುರ್ತುಸಭೆ ಕರೆಯಲಾಗಿದೆ.

# ನಾಲ್ಕನೇ ಹಂತದಲ್ಲಿ ಶೇ.64ರಷ್ಟು ಮತದಾನ



ನವದೆಹಲಿ, ಮೇ 13 – ಲೋಕಸಭಾ ಚುನಾವಣೆಯ ನಾಲ್ಕನೇ ಹಂತದಲ್ಲಿ ಶೇ.64ರಷ್ಟು ಮತದಾನವಾ ಗಿದೆ. ಹತ್ತು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ 96 ಲೋಕಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆದಿತ್ತು. ಪಶ್ಚಿಮ ಬಂಗಾಳದ ಎಂಟು ಕ್ಷೇತ್ರಗಳಿಗೆ ಚುನಾವಣೆ ನಡೆದಿದ್ದು, ಇಲ್ಲಿ ಶೇ.76.56ರಷ್ಟು ಮತದಾನವಾಗಿದೆ. ರಾಜ್ಯದಲ್ಲಿ ಅಲ್ಲಲ್ಲಿ ಹಿಂಸಾಚಾರದ ಘಟನೆಗಳು ನಡೆದಿವೆ.

ಆಂಧ್ರ ಪ್ರದೇಶದಲ್ಲಿ ಲೋಕಸಭೆಯ ಜೊತೆ, ವಿಧಾನಸಭಾ ಚುನಾವಣೆಯೂ ನಡೆದಿದೆ. ಚುನಾವಣೆ ವೇಳೆ ಹಿಂಸಾಚಾರದ ಘಟನೆಗಳು ನಡೆದಿವೆ. ನಾಲ್ಕು ಹಂತದ ಮತದಾನದ ನಂತರ, ಒಟ್ಟು 543 ಕ್ಷೇತ್ರಗಳ ಪೈಕಿ 379ರಲ್ಲಿ ಮತದಾನ ಪೂರ್ಣಗೊಂಡಂತಾಗಿದೆ.

## ನೇಪಾಳದ ಡಿಸಿಎಂ ರಾಜೀನಾಮೆ

ಕಠ್ಮಂಡು, ಮೇ 13 - ನೇಪಾಳದ ಉಪ ಮುಖ್ಯಮಂತ್ರಿ ಉಪೇಂದ್ರ ಯಾದವ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇದು ಪ್ರಧಾನ ಮಂತ್ರಿ ಪುಷ್ಪ ಕಮಾಲ್ ದಹಾಲ್ ಪ್ರಚಂಡ ನೇತೃತ್ವದ ಸರ್ಕಾರಕ್ಕೆ ಹಿನ್ನಡೆಯಾಗಿದೆ. ಆರೋಗ್ಯ ಸಚಿವರಾಗಿದ್ದ ಯಾದವ್ ಅವರು ಸೋಮವಾರ ಬೆಳಿಗ್ಗೆ ರಾಜೀನಾಮೆ ಸಲ್ಲಿಸಿದ್ದಾರೆ.

# ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳಬೇಕು

ಮಲೇಬೆನ್ನೂರು, ಮೇ 13- ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ತಮ್ಮನ್ನು ತಾವು ತೊಡಗಿಸಿಕೊಳ್ಳಿ ಎಂದು ದಾವಣಗೆರೆ ವಾಣಿಜ್ಯ ಇಲಾಖೆ ಉಪ ಆಯುಕ್ತ ಹೆಚ್.ಎಸ್.ಮಂಜುನಾಥ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅವರು, ಸೋಮವಾರ ಮಲೇಬೆನ್ನೂರು ಪಟ್ಟಣದ ಹೊರವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಸಮುದಾಯ ಭವನದಲ್ಲಿ ಕಲಾಸಿರಿ ಮಕ್ಕಳ ಸಾಂಸ್ಕೃತಿಕ ವೇದಿಕೆ ಹಾಗೂ ಕಲಾವಿದ ಡ್ಯಾನ್ಸ್ ಐಕಾನ್ ವತಿಯಿಂದ ಹಮ್ಮಿಕೊಂಡಿದ್ದ ಮಕ್ಕಳ ಬೇಸಿಗೆ ಶಿಬಿರ - 2024ರ ಸಮಾರೋಪ ಸಮಾರಂಭವನ್ನು ದೀಪ ಬೆಳಗಿಸಿ, ಉದ್ಘಾಟಿಸಿ ಮಾತನಾಡಿದರು.

ಮಕ್ಕಳು ಅಂಕ ಗಳಿಸುವುದು ಎಷ್ಟು ಮುಖ್ಯವೋ, ಇತರೆ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿರುವುದೂ ಅಷ್ಟೇ ಮುಖ್ಯವಾಗಿದೆ. ಏಕೆಂದರೆ, ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರೇ ಜಗತ್ತಿನಲ್ಲಿ ಹೆಚ್ಚು ಸಾಧನೆ ಮಾಡಿದ್ದಾರೆಂದು ಹಲವು ಸಾಧಕರ ಹೆಸರುಗಳನ್ನು ಉದಾಹರಣೆ ನೀಡಿದರು.

ನಗರ, ಪಟ್ಟಣ ಹಾಗೂ ಹಾಸ್ಟೆಲ್‌ನಲ್ಲಿ ಬೆಳೆದ ಮಕ್ಕಳಿಗಿಂತ ಗ್ರಾಮೀಣ ಪ್ರದೇಶದಲ್ಲಿ ಬೆಳೆದ ಮಕ್ಕಳಲ್ಲಿ ಹೆಚ್ಚು ಚಟುವಟಿಕೆಗಳು ಕಷ್ಟ-ಸುಖ ಮತ್ತು ಗ್ರಾಮೀಣ ಕಲೆ, ಸಾಹಿತ್ಯ, ಸಂಸ್ಕೃತಿಗಳಿರುತ್ತವೆ. ಈ ಕಾರಣಗಳಿಂದಾಗಿಯೇ ಗ್ರಾಮೀಣ ಪ್ರದೇಶದಲ್ಲಿ ಬೆಳೆದವರು, ದೇಶದಲ್ಲಿ ಉನ್ನತ ಸ್ಥಾನಗಳಲ್ಲಿದ್ದಾರೆ ಎಂದು ಹೆಚ್.ಎಸ್. ಮಂಜುನಾಥ್ ಅವರು ವಿದ್ಯಾರ್ಥಿಗಳನ್ನು ಹಾಗೂ ಪೋಷಕರನ್ನು ಹುರಿದುಂಬಿಸಿದರು.



ಮಲೇಬೆನ್ನೂರು : ಬೇಸಿಗೆ ಶಿಬಿರದಲ್ಲಿ ವಿದ್ಯಾರ್ಥಿಗಳಿಗೆ ಹೆಚ್.ಎಸ್.ಮಂಜುನಾಥ್ ಕರೆ

ಮಕ್ಕಳಲ್ಲಿರುವ ಪ್ರತಿಭೆ ಹೊರಹಾಕಲು ಇಂತಹ ಬೇಸಿಗೆ ಶಿಬಿರಗಳು ಪೂರಕವಾಗಿದ್ದು, ಈ ನಿಟ್ಟಿನಲ್ಲಿ ಚಿತ್ರಕಲಾ ಶಿಕ್ಷಕ ನಾಗರಾಜ್, ನೃತ್ಯ ನಿರ್ದೇಶಕ ಕಿರಣ್ ಅವರ ಶ್ರಮ ಸಾರ್ಥಕ ಎಂದು ಮಂಜುನಾಥ್ ಶ್ಲಾಘಿಸಿದರು.

ಹರಿಹರ ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಕೆ.ಭೋಮೇಶ್, ಮಲೇಬೆನ್ನೂರು ಪೊಲೀಸ್ ಠಾಣೆಯ ಎಎಸ್ಐ ಶ್ರೀನಿವಾಸ್ ಮಾತನಾಡಿದರು.

'ಪೋಕ್ಸೋ' ಕಾಯ್ದೆ ಬಗ್ಗೆ ತಿಳಿಸಿದ ಶ್ರೀನಿವಾಸ್ ಅವರು, ಮಕ್ಕಳಿಗೆ ಕಾನೂನಿನ ಅರಿವು ಮೂಡಿಸುವ ಪ್ರಯತ್ನ ಮಾಡಿದರು.

ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ ಮಾತನಾಡಿ, ಮಕ್ಕಳಲ್ಲಿರುವ ಪ್ರತಿಭೆ ಗುರುತಿಸುವ ಮತ್ತು ಕಲಿಸುವ ಶಕ್ತಿ ತಾಯಿ ಮತ್ತು ಶಿಕ್ಷಕರಲ್ಲಿ ಮಾತ್ರ ಇರುತ್ತದೆ. ಅಂತಹ ಕೆಲಸವನ್ನು ಎಲ್ಲಾ ತಾಯಂದಿರು, ಶಿಕ್ಷಕರು ಆಸಕ್ತಿಯಿಂದ ಮಾಡಿದ್ದಲ್ಲಿ ಮಕ್ಕಳು ಬಹಳ ಎತ್ತರದ ಸ್ಥಾನಕ್ಕೆ ಹೋಗಲು ಸಾಧ್ಯ ಎಂದು ಪ್ರತಿಪಾದಿಸಿದರು.

ಪತ್ರಕರ್ತ ಕೆ.ಎನ್.ನಾಗೇಂದ್ರಪ್ಪ, ಹೆಚ್. ಎಂ.ಸದಾನಂದ್ ಮಾತನಾಡಿ, ಬೇಸಿಗೆ ಶಿಬಿರಗಳು ಮಕ್ಕಳಲ್ಲಿ ಹೊಸ ಉತ್ಸಾಹ ಬೆಳೆಸುತ್ತವೆ ಎಂದರು.

ವೀರಭದ್ರೇಶ್ವರ ದೇವಸ್ಥಾನ ಟ್ರಸ್ಟ್ ಕಮಿಟಿಯ ಬಿ.ನಾಗೇಂದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಪತ್ರಕರ್ತ ಹಾಗೂ ಜಿಲ್ಲಾ ಕಸಾಪ ಸಂಘಟನಾ ಕಾರ್ಯದರ್ಶಿ ಜಿಗಳಿ ಪ್ರಕಾಶ್, ಜಿ.ಟಿ.ಕಟ್ಟಿ ಶಾಲೆಯ ಮುಖ್ಯ ಶಿಕ್ಷಕ ಹೆಚ್. ಆರ್.ಶಾಂತರಾಜ್, ಆರ್ಟ್ಸ್ ಮಂಜು, ಪ್ರಗತಿಪರ ಚಿಂತಕ ಕುಂದೂರು ಮಂಜಪ್ಪ, ಮಲ್ಲಿಕಾರ್ಜುನ್ ಕಲಾಲ್, ರಟ್ಟಿಹಳ್ಳಿ ಧರ್ಮಸ್ಥಳ ಯೋಜನೆಯ ಕಪಿಲ್ ದೇವ್, ಗುತ್ತಿಗೆದಾರ ಮಂಜಾನಾಯ್ಕ ಮತ್ತಿತರರು ವೇದಿಕೆಯಲ್ಲಿದ್ದರು.

ಕಲಾಸಿರಿ ಮಕ್ಕಳ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಹಾಗೂ ಚಿತ್ರಕಲಾ ಶಿಕ್ಷಕ ಭಾನುವಳ್ಳಿ ನಾಗರಾಜ್ ಸ್ವಾಗತಿಸಿದರು. ನೃತ್ಯ ನಿರ್ದೇಶಕ ಕಿರಣ್ ಬಿ.ಹೊಸೂರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಶಿಕ್ಷಕರಾದ ರೇಖಾ ಮಲ್ಲಿಕಾರ್ಜುನ್ ಪ್ರಾರ್ಥಿಸಿದರು. ಹಿಂಡಸಘಟ್ಟ ಕ್ಯಾಂಪ್ ಶಾಲೆಯ ಮುಖ್ಯ ಶಿಕ್ಷಕ ಬಿ.ಅರುಣ್‌ಕುಮಾರ್ ನಿರೂಪಿಸಿದರು. ಹಳ್ಳಿಹಾಳ್ ಕ್ಯಾಂಪ್ ಶಾಲೆಯ ಶಿಕ್ಷಕ ಪ್ರಭು ಪ್ರಸಾದ್ ವಂದಿಸಿದರು.

# ಜೀವರಾಶಿ ಮೇಲೆ ಮನುಕುಲದ ಪ್ರಭಾವಕ್ಕೆ ಪಳಿಯುಳಿಕೆ ಸಾಕ್ಷಿ

ನವದೆಹಲಿ, ಮೇ 13 - ಪಳಿಯುಳಿಕೆ ಎಂದಾಕ್ಷಣ ನಮಗೆ ಪುರಾತನ ಕಾಲದ ಪ್ರಾಣಿಗಳ ಅವಶೇಷ ಇಲ್ಲವೇ ಭೂಮಿಯಲ್ಲಿ ಆಳವಾಗಿ ಹುದುಗಿರುವ ಅಚ್ಚರಿ ತರುವ ಗುಟ್ಟುಗಳ ನೆನಪಾಗಬಹುದು. ಲಕ್ಷಾಂತರ ವರ್ಷಗಳ ಹಿಂದೆ ಉಳಿದು ಅಳಿದ ಪ್ರಾಣಿ, ಪಕ್ಷಿ, ಗಿಡ - ಮರಗಳ ನೆನಪಾಗಬಹುದು.

ಪಳಿಯುಳಿಕೆಗಳು ಗತ ಕಾಲದ ಅತ್ಯಗತ್ಯ ದಾಖಲೆಗಳಾಗಿವೆ. ಹಿಂದಿನ ಕಾಲದ ಜೀವನದ ಬಗ್ಗೆ ತಿಳಿಯಲು ಅವಶೇಷಗಳು ನೆರವಾಗುತ್ತವೆ. ಒಂದಾನೊಂದು ಕಾಲ ಸ್ಥಿರವಾಗಿತ್ತೇ? ಪ್ರಕ್ಷುಬ್ಧತೆ ಹೊಂದಿತ್ತೇ? ವಿನಾಶ ಕಂಡಿತ್ತೇ? ಎಂಬುದನ್ನು ತಿಳಿಯಲು ಪಳಿಯುಳಿಕೆ ನೆರವಾಗುತ್ತದೆ. ಗತ ಕಾಲದ ಘಟನಾವಳಿಗಳ ಬಗ್ಗೆ ಬೆಳಕು ಚೆಲ್ಲುವುದಷ್ಟೇ ಅಲ್ಲದೇ, ಭವಿಷ್ಯದ ದಿನಗಳು ಹೇಗಿರಬಹುದು ಎಂಬುದನ್ನು ಅಂದಾಜಿಸಲೂ ಪಳಿಯುಳಿಕೆಗಳು ನೆರವಾಗುತ್ತವೆ.

ಇದರ ಜೊತೆಗೆ ಪಳಿಯುಳಿಕೆಗಳಿಂದ ಕಂಡು ಬರುವ ಇನ್ನೊಂದು ಆಸಕ್ತಿಕರ ಅಂಶ ಎಂದರೆ, ಮನುಕುಲ ಹಿಂದಿನ ಕಾಲದ ಜೀವಿಗಳ ಮೇಲೆ ಯಾವ ರೀತಿ ಪರಿಣಾಮ ಬೀರಿದೆ ಎಂಬುದು. ಸಾವಿರಾರು ವರ್ಷಗಳಿಂದಲೂ ಮನುಷ್ಯನ ಚಟುವಟಿಕೆಗಳು ಇತರೆ ಪ್ರಾಣಿಗಳ ಮೇಲೆ ಪರಿಣಾಮ ಬೀರುತ್ತಲೇ ಬಂದಿವೆ.

ಅದರಲ್ಲೂ 16ನೇ ಶತಮಾನದ ನಂತರ ದೂರ ದೂರದ ಖಂಡಗಳ ನಡುವೆ ಪ್ರಾಣಿ ಹಾಗೂ ಸಸ್ಯಗಳ ವಿನಿಮಯವಾಗಿತ್ತು. ಮನುಷ್ಯ ದೂರದ ತಾಣಗಳಿಗೆ ಪ್ರಯಾಣ ಮಾಡುವಾಗ ತೆಗೆದುಕೊಂಡ ಹೋದ ಪ್ರಾಣಿಗಳು ಅಪಾರ ಪರಿಣಾಮ ಬೀರಿವೆ. ಇಂಗ್ಲೆಂಡ್‌ನಲ್ಲಿರುವ ಮೆಕ್ಕೆಜೋಳದ ಹೊಲಗಳು ಹಾಗೂ ಅಮೆರಿಕದಲ್ಲಿರುವ ಹಸುಗಳು ಇದಕ್ಕೊಂದು ಉದಾಹರಣೆ.


ಮಾನವ ಚಟುವಟಿಕೆಯು ನೂರಾರು ವರ್ಷಗಳಿಂದ ಜೀವಿಗಳ ಮೇಲೆ ಪರಿಣಾಮ ಬೀರುತ್ತಿದೆ. ಹವಾಯಿ ದ್ವೀಪಗಳಲ್ಲಿ ಸ್ಥಳೀಯವಾಗಿದ್ದ ಮೃದು ಬಸವನ ಹುಳುಗಳು ಸಂಪೂರ್ಣ ನಾಶವಾಗಿ, ಆಫ್ರಿಕಾದ ದೈತ್ಯ ಬಸವನ ಹುಳುಗಳು ಆವರಿಸಿದ್ದವು. ಇದಕ್ಕೆ ಮಾನವ ಚಟುವಟಿಕೆಯೇ ಕಾರಣ.

ಮನುಷ್ಯನ ಚಟುವಟಿಕೆಗಳ ಕಾರಣದಿಂದಾಗಿ ಕೋಳಿ, ಹಂದಿ, ಕುರಿ ಹಾಗೂ ಹಸುಗಳಂತಹ ಪ್ರಾಣಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಕಾಡು ಪ್ರಾಣಿಗಳನ್ನು ಮೀರಿಸಿ ಈ ಸಾಕು ಪ್ರಾಣಿಗಳು ಬೆಳೆದಿವೆ. ಇದು ವಿಶ್ವದಾದ್ಯಂತ ಹಿಂದಿನಿಂದಲೇ ಪರಿಣಾಮ ಬೀರಿದೆ.

ಕಳೆದ ಎರಡು ಶತಮಾನಗಳಲ್ಲಿ ಮನುಷ್ಯನ ಚಟುವಟಿಕೆಗಳಿಂದ ಭೂ ಜೀವಿಗಳ ಮೇಲೆ ಆಗಿರುವ ಪರಿಣಾಮವು ಜ್ವಾಲಾಮುಖಿ ಸ್ಫೋಟ ಹಾಗೂ ಉಲ್ಕೆಗಳು ಅಪ್ಪಳಿಸಿದಾಗ ಆಗುವ ಪರಿಣಾಮಗಳನ್ನು ಹೋಲುವಂತಿದೆ. ಮನುಷ್ಯ ಗೊತ್ತಿದ್ದೋ, ಗೊತ್ತಿಲ್ಲದೆಯೋ ಭೂಮಿಯ ಮೇಲೆ ಇಷ್ಟೊಂದು ಪರಿಣಾಮ ಬೀರಿದ್ದಾನೆ.

ಪಳಿಯುಳಿಕೆಗಳ ಅಧ್ಯಯನದ ಮೂಲಕ ಮಾನವ ಇದುವರೆಗೂ ಮಾಡಿರುವ ಪರಿಣಾಮಗಳ ಬಗ್ಗೆ ತಿಳಿಯಬಹುದು. ಇದು ಮುಂಬರುವ ದಶಕಗಳಲ್ಲಿ ಆಗುವ ಪರಿಣಾಮಗಳ ಬಗ್ಗೆಯೂ ಬೆಳಕು ಚೆಲ್ಲಲಿದೆ.

# ಶ್ರೀ ರೇವಣಸಿದ್ದೇಶ್ವರ ವಸತಿಯುತ ಶಾಲೆಗೆ ಶೇ.93.33 ರಷ್ಟು ಫಲಿತಾಂಶ



ದಾವಣಗೆರೆ, ಮೇ 13 - ತಾಲ್ಲೂಕಿನ ಬಸಾ ಪುರ ಗ್ರಾಮದ ಶ್ರೀ ರೇವಣಸಿದ್ದೇಶ್ವರ ವಸತಿಯುತ ಶಾಲೆಗೆ 2023-24ನೇ ಸಾಲಿನಲ್ಲಿ ಶೇ. 93.33 ರಷ್ಟು ಫಲಿತಾಂಶ ಲಭಿಸಿದೆ. ಶ್ರೀ ರೇವಣಸಿದ್ದೇಶ್ವರ ವಸತಿಯಿತ ಶಾಲೆಯಲ್ಲಿ ಒಟ್ಟು 30 ಮಕ್ಕಳು ಪರೀಕ್ಷೆಗೆ ಹಾಜರಾಗಿದ್ದು, 28 ಮಕ್ಕಳು ತೇರ್ಗಡೆಯಾಗಿದ್ದಾರೆ. ಶಾಲೆಗೆ ಪ್ರಥಮ ವಿದ್ಯಾರ್ಥಿನಿ ಕಾವ್ಯ ಎಸ್. 91.52%, ದ್ವಿತೀಯ ಲಕ್ಷ್ಮಿ ಆರ್. 89.28%, ತೃತೀಯ ಅಮೂಲ್ಯ 88.64%, 4 ಮತ್ತು 5ನೇಯವರಾಗಿ ವಿನಯ್‌ನಾಯ್ಕ್ ಟಿ. 80.96% ಮತ್ತು ಸ್ನೇಹ ಕೆ. 80.64% ಅಂಕಗಳೊಂದಿಗೆ ಶಾಲೆಗೆ ಕೀರ್ತಿ ತಂದಿದ್ದಾರೆ.

## ಸೋಮೇಶ್ವರ ಶಾಲೆಗೆ ಶೇ.100 ಫಲಿತಾಂಶ



ದಾವಣಗೆರೆ, ಮೇ 13- ದಾವಣಗೆರೆ ತಾಲ್ಲೂಕು ಗೋಣಿವಾಡ ಗ್ರಾಮದಲ್ಲಿರುವ ಶ್ರೀ ಸೋಮೇಶ್ವರ ವಸತಿಯುತ ವಿದ್ಯಾಲಯಕ್ಕೆ ಸಿಬಿಎಸ್‌ಇ ಪರೀಕ್ಷೆಯಲ್ಲಿ ಶೇ.100ರ ಫಲಿತಾಂಶ ಲಭಿಸಿದೆ.

ಪರೀಕ್ಷೆ ಎದುರಿಸಿದ 28 ವಿದ್ಯಾರ್ಥಿಗಳ ಪೈಕಿ 16 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 12 ವಿದ್ಯಾರ್ಥಿಗಳು ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಎಚ್.ಎಂ. ಪವನ್ 500ಕ್ಕೆ 478 ಅಂಕ ಗಳಿಸಿ, ಶಾಲೆಗೆ ಮೊದಲ ಸ್ಥಾನ ಗಳಿಸಿದ್ದಾರೆ. ಆರ್. ಎನ್. ತೇಜಸ್ 476 ಎಂ.ಎಚ್. ಭೂಮಿ 473, ವಿ. ರಕ್ಷಾ 471, ಡಿ. ರಚನಾ 469 ಅಂಕ ಗಳಿಸಿದ್ದಾರೆ.

# 12ನೇ ಶತಮಾನದಲ್ಲೇ ಸಂಸತ್ತಿನ ಪರಿಕಲ್ಪನೆ



ದಾವಣಗೆರೆ, ಮೇ 13- ಬಸವಣ್ಣನವರು ಅನುಭವ ಮಂಟಪ ಸ್ಥಾಪಿಸಿ, 12ನೇ ಶತಮಾನದಲ್ಲೇ ಸಂಸತ್ತಿನ ಪರಿಕಲ್ಪನೆ ತೋರಿಸಿದ್ದಾರೆ ಎಂದು ವಕೀಲರ ಸಂಘದ ಜಿಲ್ಲಾಧ್ಯಕ್ಷ ಎಲ್.ಎಚ್. ಅರುಣ್ ಕುಮಾರ್ ಹೇಳಿದರು.

ಕಾಯಕಯೋಗಿ ಬಸವ ಪರಿಸರ ಸಂರಕ್ಷಣಾ ವೇದಿಕೆ ಹಾಗೂ ವಿನಾಯಕ ಭಜನಾ ಮಂಡಳಿ ಇವರ ಆಶ್ರಯದಲ್ಲಿ ಇತ್ತೀಚೆಗೆ ನಡೆದ ಬಸವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು. ಬಸವಣ್ಣನವರು ಮಾನವತಾವಾದಿ ಮತ್ತು ಶ್ರೇಷ್ಠ ಚಿಂತಕರಾಗಿದ್ದರು. ಅವರ ಚಿಂತನೆ ಮತ್ತು ವಚನಗಳು ಮಾನವ ಕಲ್ಯಾಣ ಬಯಸುವ ಅನೇಕರಿಗೆ ಸ್ಫೂರ್ತಿಯಾಗಿವೆ ಎಂದರು.

ಗುರು ಬಸವರ ಆದರ್ಶದ ತಳಹದಿಯಲ್ಲಿ ಬಸವ ಪರಿಸರ ವೇದಿಕೆಯು ಸಮಾಜಮುಖಿ ಕಾರ್ಯ ಮಾಡುತ್ತಿದ್ದು, ಹಿರಿಯರ ಸಹಾಯದೊಂದಿಗೆ ಯುವಕರು ಗ್ರಾಮದಲ್ಲಿ ಅಭಿವೃದ್ಧಿ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಪರಿಸರ ಸಂರಕ್ಷಣಾ ವೇದಿಕೆ ಅಧ್ಯಕ್ಷ ಎನ್.ಟಿ. ರುದ್ರಪ್ಪ ಮಾತನಾಡಿ, ಯುವ ಪೀಳಿಗೆ ಅತಿಯಾದ ಮೊಬೈಲ್ ಬಳಕೆಯನ್ನು ಬಿಡಬೇಕು. ಗಿಡ, ಮರ ಬೆಳೆಸುವ ಮನೋಭಾವದ ಜತೆಗೆ ಪರಿಸರ ಸಂರಕ್ಷಣೆ ಕಾಳಜಿ ಹೊಂದಬೇಕು ಎಂಬ ಕಿವಿಮಾತು ಹೇಳಿದರು.

ಇದಕ್ಕೂ ಮೊದಲು ಗ್ರಾಮದಲ್ಲಿ ಭಜನೆಯ ಮೂಲಕ ಎತ್ತಿನಗಾಡಿಯಲ್ಲಿ ಬಸವಣ್ಣನವರ ಭಾವಚಿತ್ರವಿಟ್ಟು ಮೆರವಣಿಗೆ ಮಾಡಲಾಯಿತು.

ಶಾಮಿಯಾನ ವೀರೇಶಣ್ಣ, ಶಿಕ್ಷಕ ಗುರುಸಿದ್ಧಸ್ವಾಮಿ, ಬಾನಪ್ಪ, ಸಿ.ಪಿ. ಮಲ್ಲಿಕಾರ್ಜುನ್, ತಿಪ್ಪೇಶ್, ಹಾಲೇಶಣ್ಣ, ಡಿ. ಕರಿಬಸಣ್ಣ, ಸಿಎಂ ಅರುಣ್, ಕೆರನಳ್ಳಿ ರಾಜು, ಮಾಂತೇಶ್, ಗೋಪಿನಾಥ್, ರಂಗಣ್ಣ ಇತರರು ಇದ್ದರು.

## ಆನ್‌ಲೈನ್‌ನಲ್ಲಿ ಇಂದು ಶರಣ ಚಿಂತನ ಗೋಷ್ಠಿ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ಮತ್ತು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ವತಿಯಿಂದ ಬಸವ ಜಯಂತಿ ಅಂಗವಾಗಿ ಇಂದು ಸಂಜೆ 7ರಿಂದ 9ರವರೆಗೆ ಆನ್‌ಲೈನ್‌ನಲ್ಲಿ ಶರಣ ಚಿಂತನ ಗೋಷ್ಠಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಗೋಷ್ಠಿಯಲ್ಲಿ ಡಾ.ಎಂ.ಜಿ. ಈಶ್ವರಪ್ಪ ಆಶಯ ನುಡಿಗಳನ್ನಾಡಲಿದ್ದಾರೆ. ಡಾ.ಬಸವರಾಜ ನೆಲ್ಲಿಸರ ಅವರು 'ಬಸವಣ್ಣನವರ ಲೋಕದೃಷ್ಟಿ' ವಿಷಯ ಕುರಿತು ಅನುಭಾವ ನೀಡಲಿದ್ದಾರೆ. ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

## ಹೊನ್ನಾಳಿಯಲ್ಲಿ ಇಂದು ಪಂಚಮಸಾಲಿ ಸಭೆ

ಪಟ್ಟಣದ ವೀರಭದ್ರೇಶ್ವರ ದೇವಸ್ಥಾನದಲ್ಲಿ ಇಂದು ಸಂಜೆ 4 ಗಂಟೆಗೆ ಪಂಚಮಸಾಲಿ ಸಮಾಜದ ಎಸ್‌ಎಸ್‌ಎಲ್‌ಸಿ, ಪಿಯುಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳುವ ಬಗ್ಗೆ ಸಮಾಜದ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ಪಂಚಮಸಾಲಿ ಸಮಾಜದ ಅಧ್ಯಕ್ಷ ಬೆನಕನಹಳ್ಳಿ ವೀರಣ್ಣ ತಿಳಿಸಿದ್ದಾರೆ.


**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ ಪಾಳೆಯದಲ್ಲಿ ಕನ್ನಡ ಭಾಷಾ ಜ್ಞಾನ ಹಾಗೂ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ**
**SSLC ನೇರ ಪರೀಕ್ಷೆ**
IInd PUC/Senior Secondary, Arts/Commerce/Science
B.Sc.-Agriculture, B.Tech All branches, D.Pharma, B.Ed., PhD regular
B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿ.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266
ವಿ. ಸೂ: ಫೀಸನ್ನು ಕಂತಿನಲ್ಲಿ ಪಾವತಿಸಬಹುದು

**ಮನೆಗಳು ಬಾಡಿಗೆಗೆ, ಲೀಸ್‌ಗೆ ಇವೆ**
ಸಿಂಗಲ್ ಬೆಡ್ ರೂಮ್, ಡಬಲ್ ಬೆಡ್ ರೂಮ್, ಮೂರು ಬೆಡ್ ರೂಮ್ ಮನೆಗಳು ಇವೆ. ವಿದ್ಯಾನಗರ, ತರಳಬಾಳು ಬಡಾವಣೆ, ಆಂಜನೇಯ ಬಡಾವಣೆ, ಶಿವಕುಮಾರ ಸ್ವಾಮಿ ಬಡಾವಣೆಗಳಲ್ಲಿ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಕರ್ನಾಟಕ ಮುಕ್ತ ವಿದ್ಯಾಲಯ (KOS)**
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ
SSLC/PUC/ಪದವಿ/ಸ್ನಾತಕೋತ್ತರ ಪದವಿ & ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

**ಬೇಕಾಗಿದ್ದಾರೆ**
MRP ಲಿಕ್ಕರ್ ಶಾಪ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ, ಶಾಮನೂರು ರೋಡ್, ದಾವಣಗೆರೆ.
98861 66432

**ಶ್ರೀ ದುರ್ಗಾ ಹಾಸ್ಪಿಟಲ್ ಬೇಕಾಗಿದ್ದಾರೆ**
ನರ್ಸಿಂಗ್ ಸೂಪರಿಂಟೆಂಡೆಂಟ್ ವಯಸ್ಸು : 30 ರಿಂದ 45 ವರ್ಷದ ಒಳಗೆ (Minimum 15, + Years of Experience) ಸ್ಟಾಫ್ ನರ್ಸ್ (ಮಹಿಳೆ) GNM / B.Sc or M.Sc Nursing (Minimum 7 years of experience)
ವಿ.ಸೂ : ವಸತಿ ಸೌಲಭ್ಯ ಇರುವುದಿಲ್ಲ
8ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಎದುರು, ಶಾಮನೂರು ಮುಖ್ಯ ರಸ್ತೆ, ದಾವಣಗೆರೆ 577004. 91648 43309
73378 53689, 97439 47362

**ಮಳಿಗೆ ಬಾಡಿಗೆಗಿದೆ**
ಚರ್ಚ್ ರಸ್ತೆ, ಲೂರ್ಡ್ಸ್ ಬಾಯ್ಸ್ ಸ್ಕೂಲ್ ಹತ್ತಿರ, ಮೇನ್ ರೋಡ್,
ಸಂಪರ್ಕಿಸಿ :
96201 62541

**ಮನೆ ಕೆಲಸ ಮಾಡುವವರು ಬೇಕಾಗಿದ್ದಾರೆ**
ವಿದ್ಯಾನಗರದಲ್ಲಿ ವಯಸ್ಸಾದ ಹೆಣ್ಣು ಮಗಳಿಗೆ ನೋಡಿಕೊಂಡು, ಮನೆ ಕೆಲಸ ಹಾಗೂ ಅಡುಗೆ ಮಾಡುವ ಪ್ರಾಮಾಣಿಕ ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ಉತ್ತಮ ಸಂಬಳ ನೀಡಲಾಗುವುದು. ತಕ್ಷಣ ಭೇಟಿ ಕೊಡಿ. ಮೊ ನಂ.
94496 79324

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದವಾಡ ಹತ್ತಿರ, ಸುಶಿ ಕನ್ವೆನ್ಷನ್ ಹಾಲ್ ಹಿಂಭಾಗ ಹೊಸ ಬಡಾವಣೆಗಳಲ್ಲಿ 30x40 ಪಶ್ಚಿಮ, 30x50 ಉತ್ತರ, 30x40 ಪಶ್ಚಿಮ ಅಕ್ಕ-ಪಕ್ಕ 30x50 ಪೂರ್ವ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಅಕೌಂಟ್ಸ್ ನೋಡಿಕೊಳ್ಳಲು ಬಿ.ಕಾಂ. ಆಗಿರುವ ಮಹಿಳಾ ಅಭ್ಯರ್ಥಿ ಮತ್ತು ಕಲೆಕ್ಷನ್ ಬಾಯ್ ಬೇಕಾಗಿದ್ದಾರೆ. ಸಂಪರ್ಕಿಸಿ :
ನವೋದಯ ಚಿಟ್ ಫಂಡ್ಸ್,
ಸ್ಟಾಲ್ ನಂ.34, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ.
ಸಂಪರ್ಕ ಸಮಯ : ಬೆಳಿಗ್ಗೆ 11.30

**ಅತೀ ಕಡಿಮೆ ಖರ್ಚಿನಲ್ಲಿ MBBS**
18 ರಿಂದ 32 ಲಕ್ಷದೊಳಗೆ ವಿದೇಶಗಳಲ್ಲಿ MBBS ಮಾಡಬಹುದು.
(NEET 130 SCORE ABOVE )
CONTACT :
98868 96574, 86602 35013

**ಸೈಟ್ ಪತ್ರ, ಕಳೆದಿದೆ**
ರಘುನಾಥ್ ಹೆಸರಿನಲ್ಲಿರುವ ಕರೂರು ಇಂಡಸ್ಟ್ರಿಯಲ್ ಏರಿಯಾದಲ್ಲಿ ಬರತಕ್ಕ ಸೈಟ್ ನಂ. 7-ಜಿ1ನ ಖರೀದಿ ಪತ್ರವು ದಿನಾಂಕ : 22.03.2024 ರಂದು ಮನೆ ಖಾಲಿ ಮಾಡುವಾಗ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನ್‌ಗೆ ತಿಳಿಸಲು ಕೋರಿದೆ.
99800 02121

**ಬೇಕಾಗಿದ್ದಾರೆ**
ಸ್ವೀಟ್ಸ್ ಮತ್ತು ಬೇಕರಿಯಲ್ಲಿ ಕೌಂಟರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ.
ಮೊ : 91138 57837

**ಕೆಲಸಕ್ಕೆ ಬೇಕಾಗಿದ್ದಾರೆ**
ಷೋ ರೂಂನಲ್ಲಿ ಕೆಲಸ ಮಾಡಲು DTP ಮತ್ತು ಕೋರಲ್ ಡ್ರಾ ಅನುಭವವುಳ್ಳವರು ಬೇಕಾಗಿದ್ದಾರೆ. ಸಂಬಳದ ಜೊತೆಗೆ ESI-PF ಒಳಗೊಂಡಿರುತ್ತದೆ.
ಶ್ರೀನಿವಾಸ ಹೋಂಡಾ, ಹದಡಿ ಮೇನ್, ರೋಡ್, ದಾವಣಗೆರೆ.
70269 49724

**ತಕ್ಷಣ ಬೇಕಾಗಿದ್ದಾರೆ**
ರಾಜ್ ಭವನ್ ಬಾರ್ & ರೆಸ್ಟೋರೆಂಟ್, ಹರಿಹರ
- ರೆಸ್ಟೋರೆಂಟ್ ಮ್ಯಾನೇಜರ್
- ಕುಕ್ಸ್
- ವೆಂಡರ್ಸ್
- ಬಿಲ್ಲಿಂಗ್ ಕಂಪ್ಯೂಟರ್ಸ್
- ಸಪ್ಲೈಯರ್ಸ್
- ಕ್ಯಾಪ್ಟನ್
ಅನುಭವವುಳ್ಳವರಿಗೆ ಆಕರ್ಷಕ ಸಂಬಳ
99726 98591
94490 37488

**WANTED LADY TEACHERS**
* B.sc./BEd., - PCM/ CBZ - 04 posts
* BA/BEd.,- 04 posts
* COMPUTER TEACHERS -02
Note: we preference will be given to right & experienced & attractive salary will be given to experienced candidates.
95356 10817

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿರುವ ಗರ್ಭಿಣಿ ಮಹಿಳೆಯನ್ನು ಹಾರೈಕೆ ಮಾಡಲು ಹಾಗೂ ಹೆರಿಗೆಯ ನಂತರ ತಾಯಿ ಮತ್ತು ಮಗುವನ್ನು ಹಾರೈಕೆ ಮಾಡಲು ಸೂಕ್ತ ನುರಿತ ನರ್ಸಿಂಗ್ ಆಗಿರುವ ಮತ್ತು ಅನುಭವ ಇರುವ ನರ್ಸ್ ಬೇಕಾಗಿದ್ದಾರೆ. ಒಳ್ಳೆಯ ಆಕರ್ಷಕ ಸಂಬಳ ನೀಡಲಾಗುತ್ತದೆ. ಸಂಪರ್ಕಿಸಿ.
70224 60467

**WANTED**
Banking Sector
Tele Caller (Female Only)
Qualification : Any Degree.
85500 23110
Interview time : 11 am

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**WANTED TEACHERS**
B.Sc,B.E or any degree
(Only Ladies)
Tatva Pre School
Davangere
99641 10736

**ಬೇಕಾಗಿದ್ದಾರೆ**
ಕೌಂಟರ್ ನೋಡಿಕೊಳ್ಳಲು ಬೇಕಾಗಿದ್ದಾರೆ.
ಸವಿ ಪೇಸ್ಟ್ರೀಸ್ (ಕೇಕ್ ಶಾಪ್)
ಸಂಪರ್ಕಿಸಿ: 80956 52555

**ಅಡುಗೆ ಮಾಡಲು ಮಹಿಳೆ ಬೇಕು**
ಸಂಪರ್ಕಿಸಿ : ಚಿಂದೋಡಿ ಲೀಲಾ ಅತಿಥಿ ನಿಲಯ C/o ಶಂಕರಲೀಲಾ ಕನ್‌ವೆನ್ಷನ್ ಹಾಲ್, ಆವರಗೆರೆ - ದಾವಣಗೆರೆ.
ಮೊ. 99164-54770

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಹೋಟೆಲ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಅನುಭವ ಉಳ್ಳವರಿಗೆ ಮಾತ್ರ. 18,000/- ಸಾವಿರ ಸಂಬಳ ಕೊಡಲಾಗುತ್ತದೆ.
85531 60355

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**TUITIONS FOR**
ICSE - CBSE - STATE
1st to 10th
ಟ್ಯೂಷನ್ ಮಾಡಲಾಗುವುದು
Contact : Vidya Vikas Tuitions Centre, Behind Aaraike Hospital, Dvg
Mob : 83109 32579

**ಆಫೀಸ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಕಿಸಾನ್ ವರ್ಲ್ಡ್, ಹದಡಿ ರಸ್ತೆ, ವಾಣಿ ರೈಸ್ ಮಿಲ್ ಎದುರು, ದಾವಣಗೆರೆ
86603 25898

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ನಲ್ಲಿ ಆಸಕ್ತಿ ಇರುವ ಯುವಕರು ಬೇಕಾಗಿದ್ದಾರೆ.
ವೇತನ : 15000/-ರಿಂದ 20000/-
ವಿಳಾಸ: ಶ್ರೀ ದುರ್ಗಾ ಎಲೆಕ್ಟ್ರಾನಿಕ್ & ಫರ್ನಿಚರ್ಸ್
ಪಿ.ಬಿ. ರೋಡ್.ತ್ರಿಶೂಲ್ ಟಾಕೀಸ್ ಎದುರು ದಾವಣಗೆರೆ.
89717 36362

**KHB ಬಡಾವಣೆಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
ಸೈಟ್ ನಂ. 1641-1642 ಎರಡು ಸೈಟ್‌ಗಳು ಮಾರಾಟಕ್ಕಿವೆ.
ಸಂಪರ್ಕಿಸಿ :
94484 42861

**NAME CLARIFICATION**
I **SHIRIN BANU** resident @ Ist Main, Ist Cross, Mahaboob Nagar, Davangere - 577 001. In My old Pan Card my name entered as **Sherein Khanum,** My new Pan Card My name entered as **Shirin Banu** above said two names are me only none one else. In future all my records and transactions will be using my name as **Shirin Banu** sworn before Notary Davangere on 9.5.2024.
Sd/- **Shirin Banu**

**CHANGE OF NAME**
I **EJAZ KHAN** resident @ Ist Main, Ist Cross, Mahaboob Nagar, Davangere - 577 001. In My old Pan Card my name entered as **Ajaz Khan,** My new Pan Card My name entered as **Ejaz Khan** above said two names are me only none one else. In future all my records and transactions will be using my name as **Ejaz Khan** sworn before Notary Davangere on 9.5.2024.
Sd/- **Ejaz Khan**

**ಬೇಕಾಗಿದ್ದಾರೆ**
ಮನೆಯಲ್ಲಿ ಅಡುಗೆ ಮಾಡುವವರು ಬೇಕಾಗಿದ್ದಾರೆ. ಬೆಳಿಗ್ಗೆ 7 ರಿಂದ ಮಧ್ಯಾಹ್ನ 1 ಗಂಟೆಯವರೆಗೆ. ಆಸಕ್ತಿ ಇರುವ ಹೆಣ್ಣು ಮಕ್ಕಳು ಈ ನಂಬರ್‌ಗೆ ಸಂಪರ್ಕಿಸಿ.
84315 29083

ANAGODU NANJUNDAPPA SEVA SAMSTHE ® ANAGODU
**SRI SIDDESHWARA NURSERY, HIGHER PRIMARY AND HIGH SCHOOL**
( ENGLISH MEDIUM)
H Nanjundappa Nagara , NH4, Anagodu-577556, Davangere Tq & Dist
**URGENT REQUIRMENT**
Interview on 20-05-2024

| Name of the post | No. of vacancies |
|---|---|
| B.A., B.Ed. (English) | 03 |
| B.Sc, B.Ed. ( Maths) | 04 |
| B.Sc, B.Ed. (Science) | 04 |
| B.A, B.ED. (Social Science) | 02 |
| Computer Teacher | 01 |
| NTC | 01 |

Teachers are wanted for the above post. Immediately attend the interview along with all your original documents in office between 10:00 am to 4:00 pm. Fluency in English is must. Experienced, dedicated teachers will get good future. ESI & PF facility are available.
Admission Started 2024-2025 for PG to 10th std.
Contact :8951195455 / 9743483636 / 8971976181
Email : srisiddeshwaraconvent@gmail.com
Note : Resume send within 19-05-2024

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಶಾಕಿರ ಬ್ಯೂಟಿಪಾರ್ಲರ್**
ಕೆಲಸಕ್ಕೆ ಬೇಕಾಗಿದ್ದಾರೆ
ಬ್ಯೂಟಿಷಿಯನ್ ಮಹಿಳೆ - 3
ಸಹಾಯಕರು ಮಹಿಳೆ - 3
# 741/4, 10th main, P.J. Extension, Davanagere. Contact :
93420 19013

**ಶಿಕ್ಷಕಿಯರು ಬೇಕಾಗಿದ್ದಾರೆ**
ಜ್ಞಾನ ದೀಪ ಪಬ್ಲಿಕ್ ಸ್ಕೂಲ್ ನಿಟ್ಟುವಳ್ಳಿ, ದಾವಣಗೆರೆ - 577004.
1) BA, B.Ed, - 4. 2) Hindi B.Ed - 1. 3) B.Sc, B.Sc, B.Ed - 1. 4) PUC / B.A, D.Ed - 2. 5) NTC - 2.
94496 79346, 89710 18943

**Teachers Wanted**
NTC/RBST/PUC Science, BA Eng, B.Com, B.Sc.B.Ed, CP Ed/BP.Ed, Office Clerk.
**S.N. Public School**
B1- Davangere/ B2- Harihar/B3- Mittalakatte
9741746205 /7795561852

**ಅರ್ಚಕರು ಬೇಕಾಗಿದ್ದಾರೆ**
ತಕ್ಷಣವೇ ಲಕ್ಷ್ಮೀ ವೆಂಕಟೇಶ್ವರ ದೇವಸ್ಥಾನದಲ್ಲಿ ಬ್ರಾಹ್ಮಣ ಅರ್ಚಕರು ಬೇಕಾಗಿದ್ದಾರೆ. ಪೂಜೆ ಮಾಡಲು ಹಾಗೂ ಶುಚಿ-ರುಚಿ ಅಡುಗೆ ಮಾಡಲು ನುರಿತ ಮಹಿಳೆಯರು ಬೇಕಾಗಿದ್ದಾರೆ.
73535 07622

**ಬೇಕಾಗಿದ್ದಾರೆ**
ಸನ್ನಿಧಿ ಟ್ರೇಡಿಂಗ್ ಕೋ
ದಾವಣಗೆರೆ ವಿಭಾಗಕ್ಕೆ ಡ್ರೈವರ್ಸ್, ಡೆಲಿವರಿ ಬಾಯ್ಸ್, ಟೆಲಿಕಾಲರ್ಸ್, ಮಾರ್ಕೆಟಿಂಗ್, ಎಕ್ಸಿಕ್ಯೂಟಿವ್ಸ್ ಬೇಕಾಗಿದ್ದಾರೆ.
8904580031, 8904580032
8904580037 8904580038

**ದಾವಣಗೆರೆ ಷುಗರ್ ಕಂಪನಿ ಲಿಮಿಟೆಡ್., ಕುಕ್ಕುವಾಡ.**
**ಶೇರುದಾರರ ವಿಶೇಷ ಮಹಾಸಭೆ**
ದಾವಣಗೆರೆ ಷುಗರ್ ಕಂಪನಿ ಲಿಮಿಟೆಡ್., ಕುಕ್ಕುವಾಡ ಇದರ ಷೇರುದಾರರ ವಿಶೇಷ ಮಹಾಸಭೆಯನ್ನು ದಿನಾಂಕ : 15.05.2024 ರ ಬುಧವಾರದಂದು ಬೆಳಗ್ಗೆ 11.00 ಘಂಟೆಗೆ ತೊಗಟವೀರ ಕಲ್ಯಾಣ ಮಂಟಪ, ಎಂಸಿಸಿ "ಎ" ಬ್ಲಾಕ್, ದಾವಣಗೆರೆಯಲ್ಲಿ ಕರೆಯಲಾಗಿದೆ. ಆದುದರಿಂದ ಸಮಸ್ತ ಷೇರುದಾರರು, ತಪ್ಪದೇ ಈ ವಿಶೇಷ ಮಹಾಸಭೆಗೆ ಹಾಜರಾಗಿ ಸಭೆಯ ಕಲಾಪಗಳಲ್ಲಿ ಭಾಗವಹಿಸಲು ಕೋರಿಕೊಳ್ಳುತ್ತೇವೆ.
ತಮ್ಮ ವಿಶ್ವಾಸಿ,
ಎಸ್.ಎಸ್.ಗಣೇಶ್, ವ್ಯವಸ್ಥಾಪಕ ನಿರ್ದೇಶಕರು

**LADY TEACHERS**
Wanted For Nursery School
Degree - 3 Posts
PUC - 3 Posts
Contact : Vidya Vikas Convent, Behind Aaraike Hospital, Dvg.
Mob : 74831 70369

**ಡ್ರೈವರ್ ಹಾಗೂ ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ.**
ಮೊ : 96205 95579

**ಬೇಕಾಗಿದೆ**
ಸನ್ನಿಧಿ ಟ್ರೇಡಿಂಗ್ ಕೋ
ದಾವಣಗೆರೆ ವಿಭಾಗಕ್ಕೆ ವಾಹನ ಅಟ್ಯಾಚ್ ಮಾಡಿಕೊಳ್ಳಲಾಗುತ್ತದೆ. Maruthi Super Carry, Ashok Leykand Dost, Bolero Pickup
CNG ವಾಹನಗಳಿಗೆ ಆದ್ಯತೆ
8904580031, 8904580032
8904580037 8904580038

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

1974 2023

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಮಂಗಳವಾರ, ಮೇ 14, 2024

☎ 08192 254736 91642 99999



ತೈಲಾಭಿಷೇಕ ...

ವಿಜಯನಗರ ಜಿಲ್ಲೆ ಕೊಟ್ಟೂರು ತಾಲ್ಲೂಕಿನ ಉಜ್ಜಯಿನಿ ಶ್ರೀ ಮರುಳಸಿದ್ದೇಶ್ವರ ಸ್ವಾಮಿ ರಥೋತ್ಸವದ ಅಂಗವಾಗಿ ಶಿಖರ ತೈಲಾಭ್ಯಂಜನ ಉತ್ಸವ ಸೋಮವಾರ ವೈಭವದಿಂದ ನೆರವೇರಿತು.

## ಬಳಪದ ಕಲ್ಲಿನ ಗೋಪುರಕ್ಕೆ ಭಕ್ತರಿಂದ ತೈಲಾಭಿಷೇಕ

ಕೊಟ್ಟೂರು, ಮೇ 13 - ತಾಲ್ಲೂಕಿನ ಉಜ್ಜಯಿನಿ ಮರುಳಾರಾಧ್ಯ ಪೀಠದ ವಿಶಿಷ್ಟ ಆಚರಣೆ ಆಗಿರುವ ಸ್ವಾಮಿಯ ಗೋಪುರದ ಶಿಖರಕ್ಕೆ ಗೋಧೂಳಿ ಲಗ್ನದಲ್ಲಿ ತೈಲಾಭಿಷೇಕ ಮಾಡುವ ಸಂಪ್ರದಾಯದ ಉತ್ಸವ ಅದ್ದೂರಿಯಾಗಿ ಭಕ್ತಾದಿಗಳ ಸಮ್ಮುಖದಲ್ಲಿ ನಡೆಯಿತು.

ಜಗದ್ಗುರು ಮರುಳಸಿದ್ಧ ರಾಜ ದೇಶೀಕೇಂದ್ರ

**'ಅಪರೂಪದ ಕಲಾಸಂಪತ್ತು ಉಜ್ಜಿನಿಯ ಶಿಖರ'**

ಸ್ವಾಮಿಗಳ ಸಮ್ಮುಖದಲ್ಲಿ ನಡೆದ ಈ ಉತ್ಸವದಲ್ಲಿ ಲಕ್ಷಾಂತರ ಭಕ್ತ ಸಮೂಹ ಹಾಗೂ ಸುತ್ತಲಿನ ಹತ್ತಾರು ಹಳ್ಳಿಗಳ ಜನರು ಪಾಲ್ಗೊಂಡು ವಿಜೃಂಭಿಸಿದರು.

ಪ್ರತಿವರ್ಷ ವೈಶಾಖ ಶುದ್ಧ ಷಷ್ಠಿಯಂದು ನಡೆಯುವ ಶ್ರೀ ಮರುಳಸಿದ್ಧೇಶ್ವರ ಸ್ವಾಮಿಯ ಶಿಖರ ತೈಲಾಭಿಷೇಕವು ದಕ್ಷಿಣ ಭಾರತದಲ್ಲಿಯೇ ವಿಶೇಷವಾಗಿದೆ. ಜರ್ಮಲಿ ಪಾಳೆಗಾರರ ವಂಶಸ್ಥರು ಪ್ರತಿವರ್ಷವೂ ಶಿಖರದ ತೈಲಾಭಿಷೇಕಕ್ಕೆ ತೈಲವನ್ನು ಕಳಿಸುವುದು (2ನೇ ಪುಟಕ್ಕೆ)

## ತ್ಯಾಜ್ಯ ವಿಲೇವಾರಿ ಘಟಕದಿಂದ ಸಮಸ್ಯೆ

### ಆವರಗೊಳ್ಳ ಗ್ರಾಮಸ್ಥರಿಂದ ಪ್ರತಿಭಟನೆ, ಡಂಪಿಂಗ್ ಯಾರ್ಡ್ ಸ್ಥಳಾಂತರಕ್ಕೆ ಆಗ್ರಹ



ದಾವಣಗೆರೆ, ಮೇ 13- ಆವರಗೊಳ್ಳದ ತ್ಯಾಜ್ಯ ವಿಲೇವಾರಿ ಘಟಕವನ್ನು ಬೇರೆಡೆಗೆ ಸ್ಥಳಾಂತರ ಮಾಡಬೇಕು, ಇಲ್ಲವೇ ವೈಜ್ಞಾನಿಕವಾಗಿ ಸಂಸ್ಕರಣೆಯಾಗುವ ಪಾಲಿಕೆಯ ಕಸ ತರಬಾರದು ಎಂದು ಒತ್ತಾಯಿಸಿ, ಆವರಗೊಳ್ಳ ಗ್ರಾಮಸ್ಥರು ಸೋಮವಾರ ರಸ್ತೆ ತಡೆದು ಪ್ರತಿಭಟನೆ ನಡೆಸಿದ್ದಾರೆ.

ಆವರಗೊಳ್ಳದ ಬಳಿ ಡಂಪಿಂಗ್ ಯಾರ್ಡ್‌ಗೆ ಬೆಂಕಿ ಬಿದ್ದು 10 ದಿನ ಕಳೆದರೂ ಬೆಂಕಿ ನಂದಿಸಲು ಕ್ರಮ ಕೈಗೊಂಡಿಲ್ಲ. ತ್ಯಾಜ್ಯವನ್ನು ಸಂಸ್ಕರಿಸಲಾಗದೇ ಪಾಲಿಕೆಯವರೇ ತ್ಯಾಜ್ಯಕ್ಕೆ ಬೆಂಕಿ ಹಚ್ಚಿದ್ದಾರೆ. ಇದರಿಂದಾಗಿ ಸುತ್ತಮುತ್ತಲಿನ ಅಡಿಕೆ, ತೆಂಗು ಹಾಗೂ ಭತ್ತದ ಬೆಳೆಯ ಮೇಲೆ ಬೂದಿ ಬಿದ್ದು ಬೆಳೆ ಸಂಪೂರ್ಣ ನಾಶವಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ರಾತ್ರಿ ಹೊತ್ತು ದುರ್ನಾತದ ಜತೆಗೆ ಸೊಳ್ಳೆ ಉತ್ಪತ್ತಿ ಹೆಚ್ಚಾಗಿರುವ ಕಾರಣ ಗ್ರಾಮಸ್ಥರಿಗೆ ಅಸ್ತಮಾ, ಜ್ವರ ಸೇರಿದಂತೆ, ಇತರೆ ರೋಗ-ರುಜಿನ ಬಾಧಿಸುತ್ತಿದೆ. ನಾಯಿಗಳ ಹಾವಳಿಯಿಂದ ರೈತರು ಹೊಲ-ಗದ್ದೆಗಳಿಗೆ ನೀರು ಹಾಯಿಸಲು ಹೋಗಲು ಭಯ ಪಡುವಂತಾಗಿದೆ ಎಂದು ಆರೋಪಿಸಿದ ಗ್ರಾಮಸ್ಥರು, ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಭೇಟಿ ನೀಡಿ ಸಮಸ್ಯೆ ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಸ್ಥಳಕ್ಕೆ ಆಗಮಿಸಿದ ಹೆಚ್ಚುವರಿ ಜಿಲ್ಲಾಧಿಕಾರಿ ಸೈಯ್ಯದಾ ಆಫ್ರೀನ್ ಬಾನು ಎಸ್. ಬಳ್ಳಾರಿ ಅವರು ಪ್ರತಿಭಟನಾಕಾರರ ಮನವೊಲಿಕೆಗೆ ಯತ್ನಿಸಿದರು.

ಡಂಪಿಂಗ್ ಯಾರ್ಡ್‌ನಲ್ಲಿ ಬಿದ್ದಿರುವ ಬೆಂಕಿ ನಂದಿಸಲು ಈಗಿನಿಂದಲೇ ವ್ಯವಸ್ಥೆ ಮಾಡಲಾಗಿದೆ. ಹಾನಿಯಾಗಿರುವ ಬೆಳೆಯ ಸಮೀಕ್ಷೆ ನಡೆಸಿ ಪರಿಹಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ಗ್ರಾಮಸ್ಥರು ಆರೋಗ್ಯ ತಪಾಸಣೆ ನಡೆಸಲು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗುವುದು. ನೀತಿ ಸಂಹಿತೆ ಮುಗಿದ ಬಳಿಕ ಸಚಿವರೊಂದಿಗೆ ಚರ್ಚಿಸಿ ಈ ಘಟಕವನ್ನು ಸ್ಥಳಾಂತರಿಸಬೇಕೋ ಅಥವಾ ಪರ್ಯಾಯ ವ್ಯವಸ್ಥೆ ಮಾಡಬೇಕೋ ಎನ್ನುವುದನ್ನು ತೀರ್ಮಾನಿಸಲಾಗುವುದು ಎಂದು ಮನವೊಲಿಸಿದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಪ್ರತಿಭಟನೆ ಹಿಂಪಡೆದರು.

ಮಹಾನಗರ ಪಾಲಿಕೆ ವಿಪಕ್ಷ ನಾಯಕ ಕೆ. ಪ್ರಸನ್ನಕುಮಾರ್, ಸದಸ್ಯರಾದ ಎಸ್.ಟಿ. ವೀರೇಶ್, ಶಿವಾನಂದ್ ಮತ್ತಿತರರು ಗ್ರಾಮಸ್ಥರ ಸಮಸ್ಯೆ ಆಲಿಸಿದರು. ಆಯುಕ್ತೆ ರೇಣುಕಾ, ತ್ಯಾಜ್ಯದ ಸಮಸ್ಯೆ ಪರಿಹಾರಕ್ಕೆ ಸರ್ಕಾರ 21 ಕೋಟಿ ರೂ. ಬಿಡುಗಡೆ ಮಾಡಿದೆ ಎಂದರು.

ಪ್ರತಿಭಟನೆಯಲ್ಲಿ ಗ್ರಾಮಸ್ಥರಾದ ಬಿ.ಎಂ. ಷಣ್ಮುಖಯ್ಯ, ಜಿ.ಟಿ. ವೀರಣ್ಣ ಕೆ.ಸಿ. ಸಿದ್ದೇಶ್, ಶಿವಪುತ್ರಪ್ಪ, ಬೆಲ್ಲದ ಚಂದ್ರಪ್ಪ, ಪಿ. ವೀರಭದ್ರಪ್ಪ, ಎಸ್.ವೀರಯ್ಯ, ದಳಪತಿ ವೀರಯ್ಯ, ದೊಡ್ಡಪ್ಪ, ಅಂಗಡಿ ವೀರಣ್ಣ ಮತ್ತಿತರರಿದ್ದರು. ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಆಗಮಿಸಿ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿದರು.

## ಇ.ಡಿ.ಯಿಂದ 70 ಟ್ರಕ್ ತುಂಬುವಷ್ಟು ಹಣ ವಶ

ಹಾಜಿಪುರ (ಬಿಹಾರ), ಮೇ 13 - ಭ್ರಷ್ಟಾಚಾರದ ವಿರುದ್ಧ ಕ್ರಮ ತೆಗೆದುಕೊಳ್ಳುವುದನ್ನು ತಮ್ಮ ಸರ್ಕಾರ ಮುಂದುವರೆಸಲಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ವಿರೋಧ ಪಕ್ಷಗಳ ವಿರುದ್ಧ ಕೇಂದ್ರೀಯ ಸಂಸ್ಥೆಗಳ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂಬ ಆರೋಪಗಳ ನಡುವೆ ಅವರ ಹೇಳಿಕೆ ಪ್ರಾಮುಖ್ಯತೆ ಪಡೆದುಕೊಂಡಿದೆ.

ಬಿಹಾರದ ಹಾಜಿಪುರ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ಸಮಾವೇಶದಲ್ಲಿ ಮಾತನಾಡಿದ ಅವರು, ರಾಜಕಾರಣಿಗಳ ಮೇಲೆ ದಾಳಿ ನಡೆಸಿದಾಗ ಪತ್ತೆಯಾದ ಹಣ ದೇಶದ ಬಡವರಿಗೆ ಸೇರಿದ್ದು ಎಂದಿದ್ದಾರೆ. ಈ ಹಿಂದೆ ಕಾಂಗ್ರೆಸ್ ಆಡಳಿತ ಇದ್ದಾಗ ಜಾರಿ ನಿರ್ದೇಶನಾಲಯವು (2ನೇ ಪುಟಕ್ಕೆ)

## ಹೈಕೋರ್ಟ್ ಜಡ್ಜ್‌ಗಳ ನೇಮಕದಲ್ಲಿ ಹಿರಿತನ ಕಡೆಗಣನೆ ; ನೋಟಿಸ್

ನವದೆಹಲಿ, ಮೇ 13 - ಹೈಕೋರ್ಟ್ ನ್ಯಾಯಮೂರ್ತಿಗಳ ಸ್ಥಾನಕ್ಕೆ ನೇಮಿಸುವಾಗ ತಮ್ಮ ಅರ್ಹತೆ ಹಾಗೂ ಹಿರಿತನವನ್ನು ಕಡೆಗಣಿಸಲಾಗಿದೆ ಎಂದು ಹಿಮಾಚಲ ಪ್ರದೇಶದ ಇಬ್ಬರು ಜಿಲ್ಲಾ ನ್ಯಾಯಾಧೀಶರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ. ಈ ಸಂಬಂಧ ಹಿಮಾಚಲ ಪ್ರದೇಶ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್‌ಗೆ ಸುಪ್ರೀಂ ಕೋರ್ಟ್ ನೋಟಿಸ್ ಕಳಿಸಿದೆ.

ನ್ಯಾಯಾಧೀಶರಾದ ಚಿರಾಗ್ ಭಾನು ಸಿಂಗ್ ಹಾಗೂ ಅರವಿಂದ ಮಲ್ಹೋತ್ರಾ ಅವರು ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಿದ್ದಾರೆ.

## ಚಿಲ್ಲರೆ ಹಣದುಬ್ಬರ 11 ತಿಂಗಳಲ್ಲೇ ಕಡಿಮೆ

ನವದೆಹಲಿ, ಮೇ 13 – ಏಪ್ರಿಲ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಕಳೆದ 11 ತಿಂಗಳಲ್ಲೇ ಅತಿ ಕಡಿಮೆ ಶೇ.4.83ಕ್ಕೆ ಇಳಿದಿದೆ ಎಂದು ಕೇಂದ್ರ ಸರ್ಕಾರದ ಅಂಕಿ-ಅಂಶಗಳು ತಿಳಿಸಿವೆ. ಗ್ರಾಹಕರ ಬೆಲೆ ಸೂಚ್ಯಂಕ ಮಾರ್ಚ್ ತಿಂಗಳಲ್ಲಿ ಶೇ.4.85 ರಷ್ಟಿತ್ತು. ಕಳೆದ ವರ್ಷ ಏಪ್ರಿಲ್ ತಿಂಗಳಲ್ಲಿ ಶೇ.4.7 ರಷ್ಟಿತ್ತು. ಈ ಹಿಂದೆ ಮೇ 2023ರಲ್ಲಿ ಚಿಲ್ಲರೆ ಹಣದುಬ್ಬರ ಕಡಿಮೆ ಶೇ.4.31ರ ಹಂತದಲ್ಲಿತ್ತು.

## ಅಪಹರಣ ಪ್ರಕರಣ: ರೇವಣ್ಣಗೆ ಜಾಮೀನು

ಬೆಂಗಳೂರು, ಮೇ 13 – ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಜೆಡಿಎಸ್ ಹಿರಿಯ ನಾಯಕ ಹಾಗೂ ಶಾಸಕ ಹೆಚ್.ಡಿ. ರೇವಣ್ಣಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾ ಲಯ ಜಾಮೀನು ಮಂಜೂರು ಮಾಡಿದೆ.

ಹಾಸನ ಸಂಸದ ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣಕ್ಕೆ ಸಂಬಂಧಿಸಿದ ಮಹಿಳೆಯೊಬ್ಬರನ್ನು ರೇವಣ್ಣ ಅಪಹರಿಸಿದ್ದಾರೆ ಎಂದು ಆರೋಪಿಸಿ ವಿಶೇಷ ತನಿಖಾ ತಂಡ (ಎಸ್.ಐ.ಟಿ.) ಅವರನ್ನು ಬಂಧಿಸಿತ್ತು.

ರೇವಣ್ಣ ದಾಖಲಿಸಿದ್ದ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು ಜಾಮೀನು ಮಂಜೂರು ಮಾಡಿದ್ದಾರೆ.

ರೇವಣ್ಣ ದೇಶ ಬಿಟ್ಟು ಹೋಗಬಾರದು ಹಾಗೂ ಸಂತ್ರಸ್ತೆ ಇಲ್ಲವೇ ಪ್ರಕರಣಕ್ಕೆ ಸಂಬಂಧಿಸಿದವರ ಮೇಲೆ ಪ್ರಭಾವ ಬೀರಲು ಪ್ರಯತ್ನ ನಡೆಸಬಾರದು ಎಂದು ಷರತ್ತು ವಿಧಿಸಲಾಗಿದೆ. ರೇವಣ್ಣ ಅವರನ್ನು



ಮಂಗಳವಾರ ಬಿಡುಗಡೆ ಮಾಡುವ ಸಾಧ್ಯತೆ ಇದೆ.

ರೇವಣ್ಣ ಪೊಲೀಸ್ ಕಸ್ಟಡಿ ಅವಧಿ ಮೇ 8ರಂದು ಮುಕ್ತಾಯಗೊಂಡಿತ್ತು. ನಂತರ ಅವರನ್ನು ಮೇ 14ರವರೆಗೆ ನ್ಯಾಯಾಂಗ ಕಸ್ಟಡಿಗೆ ವಹಿಸಲಾಗಿತ್ತು.

ಪ್ರಜ್ವಲ್ ಪ್ರಕರಣದ ಸಂತ್ರಸ್ತೆ ಎನ್ನಲಾದ ಮಹಿಳೆಯ ಮಗ ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ಕ್ರಮ ತೆಗೆದುಕೊಂಡಿದ್ದರು.

ರೇವಣ್ಣ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಸಿ.ವಿ. ನಾಗೇಶ್, ರೇವಣ್ಣ ಬಂಧನದ ಹಿಂದೆ ರಾಜಕೀಯ ಸಂಚಿದೆ. ರೇವಣ್ಣ ಇಲ್ಲವೇ ಅವರ ಕುಟುಂಬದವರು ಅಪಹರಿಸಿಲ್ಲ ಎಂದು ಸಂತ್ರಸ್ತ ಮಹಿಳೆ ಇತ್ತೀಚೆಗೆ ಬಿಡುಗಡೆ ಮಾಡಲಾದ ವಿಡಿಯೋದಲ್ಲಿ ತಿಳಿಸಲಾಗಿದೆ ಎಂದರು.

ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಜೈನ ಕೊಠಾರಿ ಹಾಗೂ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಅಶೋಕ್ ನಾಯಕ್ ಅವರು ಎಸ್.ಐ.ಟಿ. ಪರವಾಗಿ ವಾದ ಮಂಡಿಸಿ, ಸಂತ್ರಸ್ತೆಯು ಸಿ.ಆರ್.ಪಿ.ಸಿ. ಸೆಕ್ಷನ್ 161 ಹಾಗೂ 164ರ ಅನ್ವಯ ರೇವಣ್ಣ ವಿರುದ್ಧ ಹೇಳಿಕೆ ನೀಡಿದ್ದಾರೆ ಎಂದರು.

ರೇವಣ್ಣ ಅವರು ಸಂತ್ರಸ್ತೆಯ ಅಪಹರಣದಲ್ಲಿ ಭಾಗಿಯಾಗಿದ್ದಾರೆ ಎಂಬುದಕ್ಕೆ ಎಸ್.ಐ.ಟಿ. ಯಾವುದೇ ಸಾಕ್ಷಿ ಒದಗಿಸಿಲ್ಲ. ಪ್ರಜ್ವಲ್ ರೇವಣ್ಣ ಪ್ರಕರಣಕ್ಕೂ ರೇವಣ್ಣ ವಿರುದ್ಧದ ಆರೋಪಗಳಿಗೂ ಯಾವುದೇ ಸಂಬಂಧ ಇಲ್ಲ ಎಂದು ನಾಗೇಶ್ ಹೇಳಿದರು.

ವಿಚಾರಣೆಯ ನಂತರ ನ್ಯಾಯಾಧೀಶರು ರೇವಣ್ಣಗೆ ಷರತ್ತಿನ ಜಾಮೀನು ನೀಡಿದ್ದಾರೆ.

## ನೇಪಾಳ ಭೂಪಟದಲ್ಲಿ ಭಾರತದ ಪ್ರಾಂತ್ಯ ಆಕ್ಷೇಪಿಸಿದ್ದ ಆರ್ಥಿಕ ಸಲಹೆಗಾರ ರಾಜೀನಾಮೆ

ಕಠ್ಮಂಡು, ಮೇ 13 - ಭಾರತದ ಮೂರು ಪ್ರಾಂತ್ಯಗಳನ್ನು ನೇಪಾಳದ್ದೆಂದು ತೋರಿಸುವ ಭೂಪಟ ಇರುವ ಹೊಸ 100 ರೂ.ಗಳ ನೋಟುಗಳನ್ನು ವಿರೋಧಿಸಿದ್ದ ನೇಪಾಳದ ಅಧ್ಯಕ್ಷ ರಾಮ ಚಂದ್ರ ಪೌಡೆಲ್ ಅವರ ಆರ್ಥಿಕ ಸಲಹೆಗಾರ ರಾಜೀನಾಮೆ ನೀಡಿದ್ದಾರೆ.

ಸಲಹೆಗಾರ ಚಿರಂಜೀವಿ ನೇಪಾಳ್ ಅವರ ರಾಜೀನಾಮೆಯನ್ನು ಅಧ್ಯಕ್ಷ ಅಂಗೀಕರಿಸಿದ್ದಾರೆ. ನೇಪಾಳದ ಭೂಪಟವನ್ನು ಭಾರತ ಈಗಾಗಲೇ ತಳ್ಳಿ ಹಾಕಿದೆ.

ನೇಪಾಳ ಸರ್ಕಾರ ಹೊಸ ಭೂಪಟವನ್ನು ನೋಟುಗಳಲ್ಲಿ ಮುದ್ರಿಸಿರುವುದು ಅನುಚಿತ ಕ್ರಮ ಎಂದು ನೇಪಾಳದ ಕೇಂದ್ರ ಬ್ಯಾಂಕ್‌ನ ಮಾಜಿ ಗವರ್ನರ್ ಚಿರಂಜೀವಿ ನೇಪಾಳ್ ಹೇಳಿದ್ದರು.

ಹಳೆಯ ಭೂಪಟವನ್ನು ತೆಗೆದು, ಹೊಸ ಭೂಪಟವನ್ನು 100 ರೂ.ಗಳ ನೋಟುಗಳಲ್ಲಿ ಮುದ್ರಿಸಲು ನೇಪಾಳ ಸಂಪುಟ ಕಳೆದ ವಾರ ನಿರ್ಧರಿಸಿತ್ತು. ಇದರಲ್ಲಿ ಕಾಲಾಪಾನಿ, ಲಿಪುಲೇಖ್ ಹಾಗೂ ಲಿಂಪಿಯಧುರ ಪ್ರಾಂತ್ಯಗಳನ್ನು ಸೇರ್ಪಡೆ ಮಾಡಲಾಗಿತ್ತು. ಈ ಮೂರು ಪ್ರಾಂತ್ಯಗಳು ತನಗೆ ಸೇರಿದ್ದು ಎಂದು ಭಾರತ ಹೇಳುತ್ತಾ ಬಂದಿದೆ.

ಚಿರಂಜೀವಿ ನೇಪಾಳ್ ಹೇಳಿಕೆಯನ್ನು ಸಿಪಿಎನ್ - ಯುಎಂಎಲ್ ಅಧ್ಯಕ್ಷ ಹಾಗೂ ಮಾಜಿ ಪ್ರಧಾನ ಮಂತ್ರಿ ಕೆ.ಪಿ. ಶರ್ಮಾ ಓಲಿ ಅವರು ಟೀಕಿಸಿದ್ದರು.

ನೇಪಾಳ ಕೃತಕವಾಗಿ ತನ್ನ ಭೂಭಾಗ ಹೆಚ್ಚಿಸಿಕೊಂಡಿರುವುದಾಗಿ ಹೇಳುವುದಕ್ಕೆ ಐತಿಹಾಸಿಕ ವಾಸ್ತವಾಂಶ ಇಲ್ಲವೇ ಸಾಕ್ಷಿಗಳಿಲ್ಲ. ಇದನ್ನು ಒಪ್ಪಲಾಗದು. ಇದು ಗಡಿ ವಿಷಯಕ್ಕೆ ಸಂಬಂಧಿಸಿದಂತೆ ಮಾಡಿಕೊಂಡಿರುವ ಒಪ್ಪಂದದ ಉಲ್ಲಂಘನೆ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಈ ಹಿಂದೆಯೇ ತಿಳಿಸಿತ್ತು.

## ಸಿಬಿಎಸ್‌ಇ : 10ನೇ ತರಗತಿಗೆ ಶೇ.93.60ರಷ್ಟು ಫಲಿತಾಂಶ

ನವದೆಹಲಿ, ಮೇ 13 - ಸಿಬಿಎಸ್‌ಇ 10ನೇ ತರಗತಿಯ ಫಲಿತಾಂಶ ಪ್ರಕಟಿಸಲಾಗಿದ್ದು, ಈ ಬಾರಿ ಶೇ.93.60ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿ ದ್ದಾರೆ. ಕಳೆದ ವರ್ಷ ಸಿಬಿಎಸ್‌ಇ ಹತ್ತನೇ ತರಗತಿಯಲ್ಲಿ ಶೇ.93.12ರಷ್ಟು ಫಲಿತಾಂಶ ದೊರೆತಿತ್ತು.

ಬಾಲಕಿಯರು ಶೇ.94.75ರಷ್ಟು ಉತ್ತೀರ್ಣರಾಗಿ ದ್ದಾರೆ. ಬಾಲಕರ ಉತ್ತೀರ್ಣ ಪ್ರಮಾಣ ಶೇ.92.71 ಆಗಿದೆ. 47 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಶೇ.95ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ. 2.12 ಲಕ್ಷ ವಿದ್ಯಾರ್ಥಿಗಳು ಶೇ.90ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ.

ಹತ್ತು ಹಾಗೂ 12ನೇ ತರಗತಿಗೆ ಜುಲೈ 15ರಿಂದ ಪೂರಕ ಪರೀಕ್ಷೆಗಳನ್ನು ನಡೆಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹತ್ತನೇ ತರಗತಿಯ 1.32 ಲಕ್ಷ ವಿದ್ಯಾರ್ಥಿಗಳನ್ನು ಪೂರಕ ಇಲ್ಲವೇ ಕಂಪಾರ್ಟ್‌ಮೆಂಟ್ ಪಟ್ಟಿಯಲ್ಲಿ ಇರಿಸಲಾಗಿದೆ. 12ನೇ ತರಗತಿಯ 1.22 ಲಕ್ಷ ವಿದ್ಯಾರ್ಥಿಗಳು ಈ ಪಟ್ಟಿಯಲ್ಲಿದ್ದಾರೆ.

### 12ನೇ ತರಗತಿಯಲ್ಲಿ ಶೇ.87.98 ಉತ್ತೀರ್ಣ

**ನವದೆಹಲಿ, ಮೇ 13 - ಸಿ.ಬಿ.ಎಸ್.ಇ. 12ನೇ ತರಗತಿ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸಲಾಗಿದ್ದು, ಶೇ.87.98ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಳೆದ ವರ್ಷ ಶೇ.87.33ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು. ಶೇ.91.52ರಷ್ಟು ಬಾಲಕಿಯರು ಹಾಗೂ ಶೇ.85.12ರಷ್ಟು ಬಾಲಕರು ಉತ್ತೀರ್ಣರಾಗಿದ್ದಾರೆ. 24,068 ವಿದ್ಯಾರ್ಥಿಗಳು ಶೇ.95ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ. 1,16,145 ವಿದ್ಯಾರ್ಥಿ ಗಳು ಶೇ.90ಕ್ಕೂ ಹೆಚ್ಚು ಅಂಕ ಪಡೆದಿದ್ದಾರೆ.**

॥ ಶ್ರೀ ಉಜ್ಜಿನಿ ಮರುಳಸಿದ್ದೇಶ್ವರ ಸ್ವಾಮಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**

ದಾವಣಗೆರೆ ಪಿ.ಜೆ. ಬಡಾವಣೆ ವಾಸಿ
**ಲಿಂ. ಶ್ರೀಮತಿ ಗೌರಮ್ಮ, ಲಿಂ. ಶ್ರೀ ಬಿ.ಜಿ. ಕೊಟ್ರಪ್ಪ** ಮಾಜಿ ಶಾಸಕರು,
ಇವರ ಸೊಸೆಯಾದ **ಶ್ರೀಮತಿ ಎಂ. ಸುನಿತಾ ಶಿವಶಂಕರ್**
ಇವರು ಮಾಡುವ ವಿಜ್ಞಾಪನೆಗಳು.
**ದಿನಾಂಕ 04.05.2024ನೇ ಶನಿವಾರ ಬೆಳಿಗ್ಗೆ 9.30ಕ್ಕೆ ನನ್ನ ಪೂಜ್ಯ ಪತಿಯವರಾದ**



ಜನನ : 10-05-1959

ನಿಧನ : 04-05-2024

**ಶ್ರೀ ಬಿ.ಜಿ. ಶಿವಶಂಕರ್**
ಇಂಜಿನಿಯರ್

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 14.05.2024ನೇ ಮಂಗಳವಾರ ಬೆಳಿಗ್ಗೆ 10.30ಕ್ಕೆ ಡಾ. ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳ ಹಿರೇಮಠ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ** ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ಎಂ. ಸುನೀತಾ ಮತ್ತು ಮಕ್ಕಳು
ಶ್ರೀಮತಿ ಶ್ರೀ ಬಿ.ಜಿ. ಮೋಹನಕುಮಾರ್ ಮತ್ತು ಮಕ್ಕಳು
ಶ್ರೀಮತಿ ಬಿಂದುಶ್ರೀ, ಶ್ರೀ ಬಿ.ಜಿ. ಪ್ರಕಾಶ್ ಮತ್ತು ಮಕ್ಕಳು
ಶ್ರೀಮತಿ ಶ್ರೀ ಬಿ.ಜಿ. ಆನಂದ ಮತ್ತು ಮಕ್ಕಳು,
ಬಿಳಸನೂರು ಗೌಡ್ರ ವಂಶಸ್ಥರು, ಗ್ರಾಮಸ್ಥರು, ಬಂಧು-ಮಿತ್ರರು.

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ತಪ್ಪದೇ ಆಗಮಿಸಬೇಕಾಗಿ ವಿನಂತಿ.

## ಬೆಳೆ ವಿಮೆ ಪರಿಹಾರ ವಿಳಂಬಕ್ಕೆ ರೈತರ ಆಕ್ರೋಶ

### ಜಂಟಿ ಕೃಷಿ ನಿರ್ದೇಶಕರ ಕಚೇರಿ ಎದುರು ಜಗಳೂರು ತಾಲ್ಲೂಕು ರೈತರ ಪ್ರತಿಭಟನೆ

ದಾವಣಗೆರೆ, ಮೇ 13- ಬೆಳೆ ವಿಮೆ ಪರಿಹಾರ ವಿಳಂಬ ನೀತಿ ಖಂಡಿಸಿ, ಶೀಘ್ರ ಪರಿಹಾರಕ್ಕಾಗಿ ಆಗ್ರಹಿಸಿ ರೈತರು ನಗರದ ಜಂಟಿ ಕೃಷಿ ನಿರ್ದೇಶಕರ ಕಚೇರಿ ಮುಂದೆ ಸೋಮವಾರ ಪ್ರತಿಭಟನೆ ನಡೆಸಿದ್ದಾರೆ.

ಮಧ್ಯಾಹ್ನ ಏಕಾ ಏಕಿ ಕೃಷಿ ಇಲಾಖೆ ಆವರಣಕ್ಕೆ ಆಗಮಿಸಿದ ಜಗಳೂರು ತಾಲ್ಲೂಕಿನ ವಿವಿಧ ಗ್ರಾಮ ಪಂಚಾಯ್ತಿಗಳ ನೂರಾರು ರೈತರು 'ಬೇಕೇ ಬೇಕು, ವಿಮೆ ಹಣ ಬೇಕು' ಎಂದು ಘೋಷಣೆ ಕೂಗಿದರು. ಕೂಲಿ ಮಾಡಿ ಬೆಳೆ ವಿಮಾ ಕಂತು ಕಟ್ಟಿದ್ದೇವೆ. ನಮಗೆ ಹಣ ಕೊಡಿಸಿ ಎಂದು ಪಟ್ಟು ಹಿಡಿದು ಪ್ರತಿಭಟಿಸಿದರು.

ಜಗಳೂರು ತಾಲ್ಲೂಕಿನ ಅಸಗೋಡು, ದಿದ್ದಿಗೆ, ಗುರುಸಿದ್ದಾಪುರ, ಸೊಕ್ಕೆ, ಗುತ್ತಿದುರ್ಗ, ದೇವಿಕೆರೆ, ಬಿಳಿಚೋಡು, ತೋರಣಗಟ್ಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರೈತರಿಗೆ ಹಣ ಬಂದಿಲ್ಲ ಎಂದು ರೈತರು ಅಸಮಾಧಾನ ಹೊರ ಹಾಕಿದರು. ನಮಗೆ ಯಾವಾಗ ಹಣ ಕೊಡುತ್ತೀರಿ? ಎಂದು ಜಂಟಿ ಕೃಷಿ ನಿರ್ದೇಶಕರನ್ನು ಪ್ರಶ್ನಿಸಿದ ರೈತರು, ನಿಮ್ಮಿಂದ ಪರಿಹಾರ ನೀಡಲಾಗದಿದ್ದರೆ, ಹಾಗೆಂದು ಬರೆದು ಕೊಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಮಾತನಾಡಿದ ಅಸಗೋಡು ಕೆ.ಬಿ. ರವಿ, ಸಾಕಷ್ಟು ರೈತರ ಬೆಳೆ ನಷ್ಟವಾಗಿದೆ. ಜಿಲ್ಲಾಧಿಕಾರಿಗಳು, ಶಾಸಕರು, ಸಚಿವರು ರೈತರ ಕಷ್ಟ ಅರ್ಥ ಮಾಡಿಕೊಳ್ಳಬೇಕು ಎಂದು ಆಗ್ರಹಿಸಿದರು.

ಬಿ.ಎಸ್. ದೇವರಾಜ ಅಸಗೋಡು ಮಾತನಾಡಿ, 6 ಎಕರೆ ಮೆಕ್ಕೆಜೋಳ ನಷ್ಟವಾಗಿದೆ. 1.50 ಲಕ್ಷ ರೂ. ಖರ್ಚು ಮಾಡಿದ್ದೆ. ಆರ್ಥಿಕವಾಗಿ ಸಂಕಷ್ಟದಲ್ಲಿದ್ದೇವೆ. ಈ ವೇಳೆ ವಿಮಾ ಪರಿಹಾರ ಬಂದರೆ ಸಹಕಾರಿಯಾಗುತ್ತದೆ ಎಂದರು.

ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್ ರೈತರ ಮನವೊಲಿಕೆಗೆ ಯತ್ನಿಸಿದರು. ತಾಂತ್ರಿಕ ಸಮಸ್ಯೆಯಿಂದ ಸಮಸ್ಯೆಯಾಗಿದೆ. ನಾಳೆ ಸಭೆ ನಡೆಸಿ ನಡಾವಳಿಯನ್ನು ಮೇಲಾಧಿಕಾರಿಗಳಿಗೆ ಕಳಿಸಿಕೊಡುತ್ತೇವೆ ಎಂಬ ಅವರ ಉತ್ತರ ರೈತರಿಗೆ ಸಮಾಧಾನ ತರಲಿಲ್ಲ.

ಸ್ಥಳಕ್ಕೆ ಹೆಚ್ಚುವರಿ ಜಿಲ್ಲಾಧಿಕಾರಿ ಸೈಯ್ಯದಾ ಆಫ್ರೀನ್ ಬಾನು ಎಸ್. ಬಳ್ಳಾರಿ ಹಾಗೂ ಪೊಲೀಸರು ಭೇಟಿ ನೀಡಿ ಪ್ರತಿಭಟನಾಕಾರರ ಮನವೊಲಿಸಲು ಯತ್ನಿಸಿದರು. ಈ ಸಂದರ್ಭದಲ್ಲಿ ನಾಳೆ ಜಿಲ್ಲಾಡಳಿತ ಭವನದಲ್ಲಿ ವಿಮಾ ಪರಿಹಾರ ವಿಳಂಬದ ಬಗ್ಗೆ ಸಭೆ ನಡೆಸಲಾಗುವುದು ಎಂದು ಭರವಸೆ ನೀಡಿದಾಗ ರೈತರು ವಾಪಾಸ್ ತೆರಳಿದರು.

# THE TEAM ACADEMY

Davangere : Vidyanagara BIET Road, Anjaneya Badavane
Shivamogga : 2nd Stage, Ravindra Nagar, Savalanga Road

**Expected NEET Score 2024**

**100+ Medical Seats Expected**

**Admissions open for 1st PUC PCMB & PCMCs**
**& Long Term NEET Batch Starts on 6th June 2024**



**600 Above 38 Students** | **500 Above 100 Students**

| 661 | 680 | 690 | 665 | 653 |
|---|---|---|---|---|
| Akash B B | Tejas T | Pakkiresh T | Harsha Vardhan | Mahesh N P |

| | | | | | | | | | |
|---|---|---|---|---|---|---|---|---|---|
| Pakkiresh T | Tejas T | Harshavardhan | Akash B B | Mahesh N P | Vinay H | Lingaraj B M | Rajath T B | Varshan Kumar | Kotresh K V |
| 690 | 680 | 665 | 661 | 653 | 645 | 645 | 641 | 640 | 640 |
| Shashank C | Atheeth | Ruthu D Rao | Shreyas B | Basavanagowda | Siri T S | Manoj Gowda | Suhas | Tanjeem Sharif | Vishnu S |
| 640 | 640 | 636 | 635 | 635 | 630 | 630 | 630 | 630 | 625 |
| Kushal A | Pavithra B M | Pooja C K | Deeksha H | Rabiya | Basavaraj | Niharika | Sandeesh M V | Spoorthi S S | Shantala T L |
| 625 | 621 | 621 | 618 | 617 | 615 | 612 | 610 | 610 | 610 |
| Suprith D K | Sri Balaji | Amith Katari | Shivani B | Yashwanth S | Kavana P | Darhan Nirvani | Bharamana Gowda | Madhavi G | Chiranthan M |
| 610 | 608 | 606 | 601 | 600 | 600 | 600 | 600 | 592 | 590 |
| Sandesh M H | Shruthi C S | Priyanka C D | Hitha | Niveditha B K | Dayana K S | Suraksha | Ayush B S | Akash F B | Sushmitha D |
| 587 | 585 | 584 | 582 | 580 | 580 | 580 | 580 | 580 | 580 |

**& Many More..!**

**For Davangere : 9035006723, 9035006724, 9035109411, 9900565795, 9538546758**
**For Shivamogga : 9035006726, 9035006727, 9902303441, 9963505593, 9591319279**


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas